ಐಕ್ಯರಂಗ

(ವಾರ ಪತ್ರಿಕೆ)

ಭಾರತ ಕಮ್ಯುನಿಸ್ಟ್ ಪಕ್ಷ[ಮಾರ್ಕ್ಸ್‌ವಾದಿ]ಕರ್ನಾಟಕ ರಾಜ್ಯ ಸಮಿತಿಯ ಮುಖಪತ್ರಿಕೆ

ಸಂಪುಟ 5 ಸಂಚಿಕೆ 14 ಏಪ್ರಿಲ್ 3, 1983 ಬೆಲೆ 60 ಪೈಸೆ

ವಿಧಾನಸಭೆಯಲ್ಲಿ

ಕಾ॥ ಸೂರಿ ಅವರ ಭಾಷಣ

ವೃತ್ತಿ ಕರವನ್ನು ರದ್ದು ಮಾಡಿ ಅದರಿಂದುಂಟಾಗುವ ಹಾನಿಯನ್ನು ರಿಕ್ರಿಯೇಶನ್ ಕ್ಲಬ್‌ಗಳ ಮೇಲೆ ಟ್ಯಾಕ್ಸ್ ಹಾಕಿ ತುಂಬಿಕೊಳ್ಳಬೇಕೆಂದು ಸಿಪಿಐ(ಎಂ) ಶಾಸಕರಾದ ಕಾ॥ ಎಸ್. ಸೂರ್ಯನಾರಾಯಣ ರಾವ್ ಅವರು ಕರ್ನಾಟಕ ವಿಧಾನ ಸಭೆಯಲ್ಲಿ ಬಜೆಟ್ಟಿನ ಮೇಲೆ ಭಾಷಣ ಮಾಡುತ್ತ ಹೇಳಿದರು. ಇಂಥ ಕೆಲವು ಕ್ಲಬ್‌ಗಳು ಪ್ರತಿ ದಿವಸ ರೂ, 70 ಸಾವಿರದಷ್ಟು ಲಾಭ ಗಳಿಸುತ್ತವೆಂದೂ, ಇಂಥವುಗಳ ಮೇಲೆ ತೆರಿಗೆ ಹಾಕುವುದರಿಂದ ಸರಕಾರಿ ಬೊಕ್ಕಸಕ್ಕೆ ರೂ. 5 ಕೋಟಿಯಷ್ಟು ಹಣ ಸಿಗಲು ಸಾಧ್ಯತೆಯಿದೆಯೆಂದೂ ಹೇಳಿದರು. ಜೂಜು ಆಡಲಿಕ್ಕೆ ಹೋಗುವವರು ಈ ಟ್ಯಾಕ್ಸ್ ಕೊಡಲು ಹಿಂಜರಿಯಲಿಕ್ಕಿಲ್ಲೆಂದೂ ಪ್ರೊಫೆಶನಲ್ ಟ್ಯಾಕ್ಸ್‌ಗಿಂತ ಇದು ಉತ್ತಮವೆಂದೂ ಹೇಳಿದರು.

ದೇಶಕ್ಕೆ ಸ್ವಾತಂತ್ರ್ಯ ಸಿಕ್ಕಂದಿನಿಂದ ಇಂದಿನವರೆಗೆ ಆಡಳಿತೆಯ ಲಾಭವೆಲ್ಲ ಬಂಡವಾಳದಾರರಿಗೂ ಭೂ.ಮಾಲಿಕರಿಗೂ ದಕ್ಕಿದೆಯೆಂದೂ, ಇಂಥ ಪದ್ಧತಿಯನ್ನು ಮುಂದುವರಿಸುವುದು ಅಪಾಯಕಾರಿ ಎಂದೂ ಆದ್ದರಿಂದ ಅದನ್ನು ವಿರೋಧಿಸುವುದಾಗಿಯೂ ಹೇಳಿದರು.

ಅಂತರ್‍ರಾಷ್ಟ್ರೀಯ ಹಣಕಾಸು ಸಂಸ್ಥೆ ನಮ್ಮ ಸರಕಾರಕ್ಕೆ ಸಾಲ ಕೊಡ ಮಾಡಿದಾಗ ಹೇರಿದ ಕರಾರುಗಳಿಂದಾಗಿಯೇ ಕೇಂದ್ರ ಸರಕಾರ ಹೇರುತ್ತಿರುವ ಕರಗಳನ್ನು ಜನರು ಸಹಿಸದಂತಾಗಿದೆ ಎಂದು ಹೇಳಿದರು. ಅಮೇರಿಕದಂತ ಸಾಮ್ರಾಜ್ಯಶಾಹಿಗಳು ಅಂತರಾಷ್ಟ್ರೀಯ ಹಣಕಾಸು ಸಂಸ್ಥೆಯ ಮೂಲಕ ಸಾಲ ಕೊಡ ಮಾಡಿ ಆ ದೇಶಗಳ ಮೇಲೆ ತನ್ನ ಹಿಡಿತವನ್ನು ಹೇರಲು ಒಳಸಂಚು ಹೂಡುತ್ತಿರುವುದರಿಂದ ಐ.ಎಂ.ಎಫ್ ಮತ್ತು ಐಬಿಆರ್‌ಡಿ ಸಾಲಗಳನ್ನು ವಿರೋಧಿಸಬೇಕಾಗಿದೆಂದು ತಿಳಿಸಿದರು

(8ನೇ ಪುಟ ನೋಡಿ)

ವಿಧಾನಪರಿಷತ್- ಜನತಾಗೆ ಜಯ

31–3–83ರಂದು ಕರ್ನಾಟಕ ವಿಧಾನ ಪರಿಷತ್ತಿನ ಎರಡು ಸ್ಥಾನಗಳಿಗೆ ನಡೆದ ಚುನಾವಣೆಯಲ್ಲಿ ಆಡಳಿತ ಪಕ್ಷದ ಉಮೇದುವಾರರು ಕಾಂಗ್ರೈ ಅಭ್ಯರ್ಥಿಗಳನ್ನು ಭಾರಿ ಬಹುಮತದಿಂದ ಸೋಲಿಸಿದ್ದಾರೆ. ಜನತಾದ ನಜೀರ್‌ಸಾಬ್ ಮತ್ತು ಪಿ. ಜಿ. ಆರ್. ಸಿಂಧ್ಯ ಅವರಿಗೆ ಎದುರಾಗಿ ಎಂ. ವಿ, ವೆಂಕಟಪ್ಪ ಮತ್ತು ಎನ್. ಆರ್. ಜಗದೀಶ್ ಅವರು ಸ್ಪರ್ಧಿಸಿದ್ದರು. ಈ ಚುನಾವಣೆಯ ಆಶ್ಚರ್ಯಗಳೆಂದರೆ ಕಾಂಗೈನ ಸದಸ್ಯರು ಜನತಾಗೆ ಮತ ನೀಡಿರುವುದು. ಕಾಂಗೈ ಅಭ್ಯರ್ಥಿಗಳಿಗೆ ತಲಾ 78 ಮತ ದೊರೆತರೆ ಜನತಾಕ್ಕೆ 141 ಮತಗಳು ದೊರೆತಿದೆ. ಇದು ಕಾಂಗೈ ಪಕ್ಷದೊಳಗೆ ಸೃಷ್ಟಿಯಾಗುತ್ತಿರುವ ಒಡಕನ್ನು ಎತ್ತಿತೋರಿಸುವುದರೊಂದಿಗೆ ಆಂತರಿಕ ಬಿಕ್ಕಟ್ಟನ್ನು ಸೂಚಿಸುತ್ತದೆ.

ಹರಿಹರ :

ಪಾಲಿಫೈಬರ್ಸ್ ಕಾರ್ಮಿಕರು ಮತ್ತೆ ಹೋರಾಟದ ಕಣದಲ್ಲಿ

ನಾಲ್ಕು ತಿಂಗಳುಗಳ ಮುಷ್ಕರ ಮುಗಿದು ಇತ್ತೀಚೆಗೆ ತಾನೇ ಪುನಃ ಆರಂಭಗೊಂಡ ಹರಿಹರ ಪಾಲಿ ಫೈಬರ್ಸ್ ಕಾರ್ಖಾನೆಯನ್ನು ಮತ್ತೆ ಮುಚ್ಚಿರುವುದಾಗಿ ಆಡಳಿತ ವರ್ಗ ಘೋಷಿಸಿದೆ.

ಖಾಯಂ ನೌಕರರು ಮುಷ್ಕರದಲ್ಲಿ ತೊಡಗಿದ್ದಾರೆಂಬ ಆಡಳಿತ ವರ್ಗದ ಹೇಳಿಕೆಯು ಸಂಪೂರ್ಣವಾಗಿ ಸುಳ್ಳು ಅಪಾದನೆಯಾಗಿದೆ. ಸುಮಾರು ಐದು ನೂರು ಮಂದಿ ಕನ್‌ಸ್ಟ್ರಕ್ಷನ್ ಕೆಲಸಗಾರರು ತಮ್ಮನ್ನು ಖಾಯಂಗೊಳಿಸಬೇಕೆಂದು ಒತ್ತಾಯಿಸಿ ಮುಷ್ಕರ ನಡೆಸುತ್ತಿದ್ದಾರೆ. ಇದರಿಂದಾಗಿ ಖಾಯಂ ಕೆಲಸಗಾರರಿಗೆ ಕೆಲಸವಿಲ್ಲದಂತಾಗಿದೆ. ಅಂದರೆ 500 ಜನ ಕಂಟ್ರಾಕ್ಟ್ ಕೆಲಸಗಾರರು ಕೆಲಸ ಮಾಡಿದಾಗ ಮಾತ್ರ ಉಳಿದ ಖಾಯಂ ಕಾರ್ಮಿಕರಿಗೆ ಅಲ್ಲಿ ಕೆಲಸವಿರುತ್ತದೆ.

ಮಾರ್ಚ್ 20ರ ಬೆಳಿಗ್ಗೆ 11ಗಂಟೆಗೆ ಮಾಲೀಕ ವರ್ಗವು ಕಾರ್ಖಾನೆಯನ್ನು ಮುಚ್ಚಲಾಗಿದೆಯೆಂದು ಘೋಷಿಸಿತು. ಅದೇ ದಿನ ರಾತ್ರಿ ಪೋಲೀಸ್ ಸೂಪರಿಂಟೆಂಡೆಟರ ನೇತೃತ್ವದಲ್ಲಿ ಪೋಲೀಸ್ ಅಧಿಕಾರಿಗಳನ್ನೊಳಗೊಂಡ ಪೋಲೀಸ್ ಪಡೆಯನ್ನು ಕಾರ್ಖಾನೆಗೆ ಕರೆಸಲಾಯಿತು. ಒಳಗೆ ಇದ್ದ ಕಾರ್ಮಿಕರನ್ನು ಪೋಲೀಸರು ಬಲವಂತವಾಗಿ ಕತ್ತುಹಿಡಿದು ಹೊರಗೆ ದಬ್ಬತೊಡಗಿದರು. ಆ ಸಮಯಕ್ಕೆ ಕಾರ್ಮಿಕ ಸಂಘದ ಅಧ್ಯಕ್ಷರಾದ ಕಾಂ। ವಿ. ಜೆ. ಕೆ. ನಾಯರ್ ಅವರು ಮಧ್ಯೆ ಪ್ರವೇಶಿಸಿ ಯಾವ ಕಾನೂನಿನ ಆಧಾರದ ಮೇಲೆ ನೀವು ಕಾರ್ಮಿಕರನ್ನು ಹೊರಗೆ ತಳ್ಳುತ್ತಿದ್ದೀರೆಂದು ಪೋಲೀಸ್ ಸೂಪರಿಂಟೆಂಡೆಂಟ್ ಅವರನ್ನು ಪ್ರಶ್ನಿಸಿದಾಗ ಮಾತ್ರ ಇದನ್ನು ನಿಲ್ಲಿಸಲಾಯಿತು. ಆ ವೇಳೆಗಾಗಲೇ

(8ನೇ ಪುಟ ನೋಡಿ)

ಸಂಪಾದಕೀಯ :

ಚುನಾವಣಾ ಪದ್ಧತಿಯಲ್ಲಿ ಬದಲಾವಣೆ

ನಮ್ಮ ದೇಶದಲ್ಲಿ ಈಗ ಜಾರಿಯಲ್ಲಿರುವ ಚುನಾವಣೆಯ ಪದ್ಧತಿಯಲ್ಲಿ ತೀವ್ರ ಬದಲಾವಣೆ ಆಗಬೇಕೆಂಬ ಸಲಹೆಗಳನ್ನು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಾರ್ಟಿಯನ್ನೊಳಗೊಂಡು ಹಲವಾರು ಕಡೆಗಳಿಂದ ಸೂಚನೆಗಳನ್ನು ಮಾಡಲಾಗುತ್ತ ಬಂದಿದೆ ಹಿಂದಿನ ಮುಖ್ಯ ಚುನಾವಣಾಧಿಕಾರಿಯಾಗಿದ್ದ ಶಕ್‌ಧರ್ ಅವರೂ ಕೂಡ ಈ ಹಿಂದೆ ಹಲವಾರು ಸೂಚನೆಗಳನ್ನು ಮುಂದಿಟ್ಟಿದ್ದರು. ಈಗ ಮತ್ತೆ ಸದ್ಯ ಮುಖ್ಯ ಚುನಾವಣಾಧಿಕಾರಿಯಾಗಿರುವ ತ್ರಿವೇದಿಯವರು ಕೆಲವು ಮುಖ್ಯ ಸೂಚನೆಗಳನ್ನು ಪ್ರಸ್ತಾಪಿಸಿದ್ದಾರೆ. ನವದೆಹಲಿಯಲ್ಲಿ ನಡೆದ ವಿಚಾರಗೋಷ್ಠಿಯೊಂದರಲ್ಲಿ ಅವರು ಭಾಷಣ ಮಾಡುತ್ತಿದ್ದರು.

ಪಕ್ಷಾಂತರ ನಿಷೇಧ, ಚುನಾವಣೆಗಳಲ್ಲಿ ಹಣಕ್ಕಿರುವ ಮಹತ್ವ, ಸರ್ಕಾರಿ ಅಧಿಕಾರದ ದುರುಪಯೋಗ, ಮತದಾನದ ವಯೋಮಿತಿ, ರಾಜಕೀಯ ಪಕ್ಷಗಳ ಸಂಖ್ಯಾಬಲ ಮೊದಲಾದ ವಿಷಯಗಳನ್ನು ವಿಚಾರಗೋಷ್ಟಿಯಲ್ಲಿ ಪ್ರಸ್ತಾಪಿಸಲಾಗಿದೆ.

ಈಗ ಆಯಾಪಕ್ಷದ ಉಮೇದುವಾರರಿಗೆ ಮತನೀಡುವ ಪದ್ಧತಿ ಇರುವುದರಿಂದ ಅರ್ಧಕ್ಕಿಂತಲೂ ಕಡಿಮೆ ಮತ ಪಡೆದ ಪಕ್ಷ ಎರಡೂ ಮೂರಾಂಶಕ್ಕಿಂತಲೂ ಅಧಿಕ ಸದಸ್ಯರನ್ನು ಪಡೆಯುತ್ತಿರುವುದನ್ನು ನೋಡುತ್ತಿದ್ದೇವೆ. ಅಲ್ಪ ಮತದಿಂದಲೇ ಸರಕಾರ ನಡೆಸುತ್ತಿದ್ದಾರೆ. ನ್ಯಾಯವಾಗಿ ಇದು ಸರಿಯಲ್ಲ, ಗ್ರಾಮೀಣ ಪ್ರಾತಿನಿಧ್ಯ ಬೇಕೆಂದು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಾರ್ಟಿ ಪ್ರತಿಪಾದಿಸುತ್ತಲೆ ಬಂದಿದೆ. ಆದರೆ ಆಳುವ ಕಾಂಗ್ರೆಸ್ ಪಕ್ಷ ಅದರ ಕಡೆ ಗಮನ ಹರಿಸಲಿಲ್ಲ, ಯಾಕೆಂದರೆ ಅದರಿಂದಾಗಿ ಕಾಂಗ್ರೆಸ್ ಪಕ್ಷ ಆಳುವ ಪಕ್ಷವಾಗಿ ಉಳಿಯಲು ಸಾಧ್ಯವಿಲ್ಲ.

ಈಗ ಚುನಾವಣಾ ಆಯುಕ್ತ ಆರ್. ಕೆ. ತ್ರಿವೇದಿಯವರು ಸಿ.ಪಿ.ಐ. (ಎಂ)ನ ಸಲಹೆಯನ್ನು ಪೂರ್ಣವಾಗಿ ಒಪ್ಪಿಕೊಳ್ಳದಿದ್ದರೂ ಅವರು ಹೇಳುವ ಸೂಚನೆಯ ಅರ್ಥ ಮಾಡಿಕೊಂಡು ಲೋಕಸಭೆ ಹಾಗೂ ವಿಧಾನಸಭೆಗಳಿಗೆ ಅರ್ಧದಷ್ಟು ಸ್ಥಾನಗಳನ್ನು ನೇರವಾಗಿ ಆಯ್ಕೆಮಾಡಿ ಉಳಿದರ್ಧ ಸ್ಥಾನಗಳನ್ನು ರಾಜಕೀಯ ಪಕ್ಷಗಳು ಸಲ್ಲಿಸುವ ಪಟ್ಟಿಯಿಂದ ಭರ್ತಿಮಾಡುವ ದಾಮಾಶಾ ಪ್ರಾತಿನಿಧ್ಯ ವ್ಯವಸ್ಥೆಯಿರಬೇಕೆಂದು ಹೇಳಿದ್ದಾರೆ.

ಲೋಕಸಭೆ-ವಿಧಾನಸಭೆ ಚುನಾವಣೆಗಳನ್ನು ಒಟ್ಟಿಗೇ ನಡೆಸಬೇಕೆಂದೂ, ಪಕ್ಷಾಂತರವನ್ನು ತಡೆಗಟ್ಟಲು ಜನತಾ ಪ್ರಾತಿನಿಧ್ಯ ಶಾಸನದಲ್ಲಿ ಸೂಕ್ತ ಮಾರ್ಪಾಡು ಮಾಡಬೇಕೆಂದೂ ಸೂಚಿಸಲಾಗಿದೆ.

ಮಂತ್ರಿಗಳು ಚುನಾವಣಾ ಪ್ರಚಾರಕ್ಕೆ ಹೋಗಬಾರದು, ಸಚಿವರು ಅಧಿಕೃತ ಪ್ರವಾಸವನ್ನು ಚುನಾವಣೆ ಪ್ರಚಾರದೊಂದಿಗೆ ತಳಕು ಹಾಕಬಾರದು, ಚುನಾವಣೆಯ ಉದ್ದೇಶಕ್ಕಾಗಿ ಸರ್ಕಾರಿ ವಾಹನ, ವಿಶ್ರಾಂತಿ ಭವನ, ಬಂಗಲೆ ಮತ್ತಿತರ ಸರ್ಕಾರಿ ಸೌಲಭ್ಯಗಳನ್ನು ಬಳಸಬಾರದೆಂದೂ ಸೂಚಿಸಿದ್ದಾರೆ.

ರಾಜಕೀಯ ಪಕ್ಷಗಳು ಚುನಾವಣೆಯಲ್ಲಿ ಮಾಡುವ ಖರ್ಚಿನ ಮೇಲೆ ಹಿಡಿತ ಇರಬೇಕೆಂದು ಸೂಚಿಸಲಾಗಿದೆ. ಚುನಾವಣೆಯಲ್ಲಿ ನಡೆಯುವ ಅವ್ಯವಹಾರಗಳನ್ನು ತಡೆಯಲು ಚುನಾವಣಾ ಅಭ್ಯರ್ಥಿಗಳಿಗೆ ಕಾಗದ, ಮತದಾರರ ಪಟ್ಟಿ ನಿರ್ದಿಷ್ಟ ಸಂಖ್ಯೆಯ ಭಿತ್ತಿಪತ್ರಗಳ ಮುದ್ರಣ, ನಿರ್ದಿಷ್ಟ ಸಂಖ್ಯೆಯ ನೊಂದಾಯಿಸಿದ ವಾಹನಗಳಿಗೆ ಪೆಟ್ರೋಲ್ ಚೀಟಿಗಳು, ಚುನಾವಣಾ ಏಜೆಂಟ್ ಮತ್ತಿತರ ಸಿಬ್ಬಂದಿಯ ಅಂಚೆ ವೆಚ್ಚ ಮೊದಲಾದ ಖರ್ಚನ್ನು ಸರ್ಕಾರವೇ ವಹಿಸಬೇಕೆಂದು ಸೂಚಿಸಿದ್ದಾರೆ.

ಇತ್ತೀಚೆಗೆ ಚುನಾವಣೆಯಲ್ಲಿ ಸ್ಪರ್ಧಿಸುವ ಜನರ ಸಂಖ್ಯೆ ಹೆಚ್ಚಾಗಿ ಗೊಂದಲ ಉಂಟಾಗುತ್ತಿದ್ದು ಇದನ್ನು ತಪ್ಪಿಸಲು ಠೇವಣಿ ವಾಪಸಾತಿ ಪಡೆಯಲು ಬೇಕಾದ ಆರನೆಯ ಒಂದಂಶದ ಕನಿಷ್ಟ ಮಿತಿಯನ್ನು ನಾಲ್ಕನೆಯ ಒಂದಕ್ಕೆ ಏರಿಸಬೇಕೆಂದು ಹೇಳಿದ್ದಾರೆ.

ಆಳುವ ಕಾಂಗ್ರೆಸ್ ಪಕ್ಷಕ್ಕೆ ಈ ಸೂಚನೆಗಳೆಲ್ಲ ವಿಷಪೂರಿತವೆಂದು ತಿಳಿಯಬಹುದು. ಹಣ. ಜಾತಿ, ಧರ್ಮದ ಹೆಸರಿನಲ್ಲೇ ಚುನಾವಣೆಗಳನ್ನು ಗೆಲ್ಲುತ್ತ ಬರುವ ಬಂಡವಾಳಶಾಹಿ ಪಕ್ಷಗಳು ಯಾವದೇ ಸುಧಾರಣೆ ಮಾಡಲು ಒಪ್ಪಲಿಕ್ಕಿಲ್ಲ. ಆದರೆ ಚುನಾವಣಾ ವಿಧಾನದಲ್ಲಿ ಬದಲಾವಣೆಯಾಗಬೇಕೆಂದು ಅಪೇಕ್ಷಿಸುವ ರಾಜಕೀಯ ಪಕ್ಷಗಳೂ, ಪುರೋಗಾಮಿ ಜನತೆಯೂ, ಸಂಘ-ಸಂಸ್ಥೆಗಳೂ, ಪರಿಣಾಮಕಾರಿಯಾದ ಚಳುವಳಿ, ಪ್ರಚಾರ–ಪ್ರಕ್ಷೋಭೆ ಮಾಡಿ, ಕೇಂದ್ರ ಸರ್ಕಾರದ ಮೇಲೆ ಒತ್ತಾಯ ತಂದರೆ ಮಾತ್ರ ಬದಲಾವಣೆಗಳಾಗಲು ಸಾಧ್ಯ. ಈ ದಿಸೆಯಲ್ಲಿ ಪ್ರಯತ್ನ ನಡೆಯಲಿ.

ಏ. 13 ರಿಂದ 17 ಕಾನ್ಪುರದಲ್ಲಿ ಸಿ.ಐ.ಟಿ.ಯು. ಅಖಿಲ ಭಾರತ ಸಮ್ಮೇಳನ

ಸರ್ಕಾರಿಯಾ ಆಯೋಗ ರಚನೆ

-ಎನ್ಕೆ

ಕರ್ನಾಟಕ ರಾಜ್ಯದ ಜನತಾ ಸರ್ಕಾರದ ಮುಖ್ಯಮಂತ್ರಿ ರಾಮಕೃಷ್ಣ ಹೆಗ್ಡೆಯವರು ದಕ್ಷಿಣ ಭಾರತದ ನಾಲ್ಕು ರಾಜ್ಯಗಳ ಮುಖ್ಯಮಂತ್ರಿಗಳ ಸಭೆ ಕರೆದು. ಕೇಂದ್ರದಿಂದ ರಾಜ್ಯ ಸರ್ಕಾರಗಳಿಗಾಗುತ್ತಿರುವ ಅನ್ಯಾಯದ ವಿರುದ್ಧ ರಾಜ್ಯಗಳಿಗೆ ಕೇಂದ್ರದಿಂದ ನ್ಯಾಯವಾಗಿ ಸಂದಾಯವಾಗಬೇಕಾಗಿರುವ ಧನ ಸಹಾಯ ಹಾಗೆಯೇ ಇತರೇ ಅಧಿಕಾರಗಳ ಕುರಿತು ಸಂಯುಕ್ತವಾಗಿ ಏಕ ರೂಪದ ನಿಲುವು ತಾಳಬೇಕೆಂದು ನಿರ್ಧಾರ ಕೈಗೊಂಡ ನಾಲ್ಕು ದಿವಸದೊಳಗಾಗಿಯೇ ಪ್ರಧಾನ ಮಂತ್ರಿ ಇಂದಿರಾಗಾಂಧಿಯವರು ಕೇಂದ್ರ–ರಾಜ್ಯಗಳ ಸಂಬಂಧ ವಿಮರ್ಶಿಸಿ, ಅವುಗಳೊಳಗಿನ ಬಾಂಧವ್ಯ ಸುಗಮಗೊಳಿಸುವುದರ ಸಲುವಾಗಿ ಸಲಹೆ ನೀಡಲು ಸುಪ್ರೀಂಕೋರ್ಟಿನ ನಿವೃತ್ತ ನ್ಯಾಯಾಧೀಶ ಆರ್. ಎಸ್. ಸರ್ಕಾರಿಯಾ ಅವರ ನೇತೃತ್ವದಲ್ಲಿ ಕೇಂದ್ರ–ರಾಜ್ಯಗಳೊಳಗಿನ ಸಂಬಂಧವನ್ನು ವಿಮರ್ಶಿಸಲು ಆಯೋಗವನ್ನು ನೇಮಿಸಲಾಗಿದೆಂಬ ಆಶ್ಚರ್ಯದಾಯಕ ಪ್ರಕಟನೆ ಹೊರಡಿಸಿದ್ದಾರೆ.

ರಾಜ್ಯಗಳಿಗೆ ಅನ್ಯಾಯವಾಗುತ್ತಿದೆಂದು ಕಳೆದ ಹಲವಾರು ವರ್ಷಗಳಿಂದ ಪ.ಬಂಗಾಲ ಹಾಗೆಯೇ ಇತರ ರಾಜ್ಯ ಸರಕಾರಗಳು ತಕರಾರು ಮಾಡುತ್ತ ಬಂದಿದ್ದರೂ ಕೂಡ ಅದರ ಕಡೆ ಗಮನವನ್ನು ಹರಿಸದ ಇಂದಿರಾಗಾಂಧಿ ಧಿಢೀರನೆ ಸರ್ಕಾರಿಯಾ ಆಯೋಗ ನೇಮಿಸುವ ನಿರ್ಣಯ ಕೈಗೊಂಡಿರುವುದಕ್ಕೆ ಕಾರಣಗಳಿವೆ.

ದಕ್ಷಿಣ ಭಾರತದ ನಾಲ್ಕು ರಾಜ್ಯಗಳ ಮುಖ್ಯಮಂತ್ರಿಗಳ ಸಭೆ ಸೇರಿದ್ದು, ಜೊತೆಯಾಗಿಯೇ ಕೇಂದ್ರದ ವಿರುದ್ಧ ಹೋರಾಡಲು ನಿರ್ಣಯಿಸಿದ್ದು, ಈ ನಿರ್ಣಯಕ್ಕೆ ಕಾಶ್ಮೀರ, ಪ. ಬಂಗಾಲಗಳಷ್ಟೇ ಅಲ್ಲ ಇನ್ನೂ ಹಲವು ರಾಜ್ಯಗಳ ಮುಖ್ಯಮಂತ್ರಿಗಳ ಹಾಗೆಯೇ ಪ್ರಮುಖ ಮುಖಂಡರಿಂದ ದೊರೆತ ಸ್ವಾಗತ ದಿಲ್ಲಿ ದರ್ಬಾರ ನಡೆಸುತ್ತಿರುವ ಇಂದಿರಾಗಾಂಧಿ ಹಾಗೂ ಅವರ ಚೇಲಾಗಳ ಮೇಲೆ ರಾಜಕೀಯ ಜ್ವರ ಉಂಟು ಮಾಡಿದೆ. ಆದ್ದರಿಂದಲೇ ಕೇಂದ್ರದ ಮಾಜಿ ಮಂತ್ರಿಯಾಗಿದ್ದು ಈಗ ಪ್ರಧಾನ ಕಾರ್ಯದರ್ಶಿಯಾಗಿರುವ ಸ್ಟೀಫನ್ ಮೊದಲಾದವರೆಲ್ಲ ಮುಖ್ಯಮಂತ್ರಿಗಳ ಈ ಸಮಾವೇಶಕ್ಕೆ 'ರಾಷ್ಟ್ರಘಾತುಕ' 'ಕೇಂದ್ರದ ವಿರುದ್ಧ ಬಂಡಾಯ'ವೆಂದು ಹೇಳಿ ಗೊಂದಲ ಉಂಟುಮಾಡಲು ಪ್ರಯತ್ನಿಸಿದ್ದಾರೆ.

ಪ.ಬಂಗಾಲ ಸರ್ಕಾರದ ಸತತ ಪ್ರಯತ್ನ ಹಾಗೆಯೇ ದಕ್ಷಿಣ ಭಾರತದ ಮುಖ್ಯಮಂತ್ರಿಗಳ ಜಂಟೀ ಸಮಾವೇಶ ಇಂದಿರಾಗಾಂಧಿಯವರು ಸರ್ಕಾರಿಯಾ ಆಯೋಗವನ್ನು ನೇಮಿಸಲು ಮುಖ್ಯ ಕಾರಣವಾಗಿದೆ. ವಿರೋಧಿಗಳ ಒತ್ತಡಕ್ಕೆ ತಾನು ತಲೆಬಾಗಿದ್ದೇನೆಂದು ಹೇಳಲು ನಾಚಿ, ತನ್ನ ಸುಳ್ಳು ಪ್ರತಿಷ್ಠೆಯನ್ನುಳಿಸಿಕೊಳ್ಳುವ ಸಲುವಾಗಿ 'ಇಂಥ ಆಯೋಗ ಒಂದನ್ನು ನೇಮಿಸಬೇಕೆಂಬ ವಿಚಾರವನ್ನು ನಾನು ಈ ಮುಂಚೆಯೇ ಹೊಂದಿದ್ದೆ' ಎಂಬ ಕುಂಟು ನೆಪವನ್ನು ಆಯೋಗ ನೇಮಿಸುವ ಪ್ರಕಟಣೆ ಹೊರಡಿಸುವಾಗ ಇಂದಿರಾಗಾಂಧಿ ಮುಂದೆ ಮಾಡಿದರು.

ಪ. ಬಂಗಾಲದ ಮುಖ್ಯಮಂತ್ರಿ ಜ್ಯೋತಿಬಸು ಅವರನ್ನೊಳಗೊಂಡು ಎಲ್ಲರೂ ಸರ್ಕಾರಿಯಾ ಆಯೋಗ ರಚನೆಯನ್ನು ಸ್ವಾಗತ ಮಾಡಿದ್ದಾರೆ. ರಾಜ್ಯ ಸರ್ಕಾರಗಳಿಂದ ಎದ್ದಿರುವ 'ಬಂಡಾಯವನ್ನು' ಮರಿಯಲು ಅಥವಾ ಅವರ ಗಮನವನ್ನು ಬೇರೆಡೆಗೊಯ್ಯಲು ಇಂಥ ಕ್ರಮಕೈಗೊಳ್ಳಲಾಗಿದೆಯೇ ಎಂಬುದನ್ನು ಎಚ್ಚರದಿಂದ ಗಮನಿಸಬೇಕಾಗಿದೆ. ವಿಚಾರ ಮಾಡಿ ಸಲಹೆ ನೀಡಲು ಯಾವ ವಿಷಯಗಳನ್ನು ಸರ್ಕಾರಿಯಾ ಆಯೋಗಕ್ಕೆ ಒಪ್ಪಿಸಲಾಗಿದೆ, ಆಯೋಗ ಯಾವ ರೀತಿಯ ಸಲಹೆ ನೀಡುತ್ತದೆ ಎಂಬ ವಿಷಯಗಳನ್ನು ಆತುರದಿಂದ ಈಕ್ಷಿಸಬೇಕಾಗಿದೆ. ಆಗ ಮಾತ್ರ ಆಯೋಗ ನೇಮಿಸುವ ಇಂದಿರಾಗಾಂಧಿಯ ಉದ್ದೇಶ ಬಯಲಾಗುತ್ತದೆ. ಅದನ್ನು ಕಾದು ನೋಡೋಣ.

ಕರ್ನಾಟಕದ ಸುಲಿಗೆ ಎಷ್ಟು

ಹಣಕಾಸು ವ್ಯವಹಾರದಲ್ಲಿ ರಾಜ್ಯಗಳಿಗೆ ಕೇಂದ್ರದಿಂದ ಅನ್ಯಾಯ-ವಂಚನೆ ಆಗುತ್ತಿದೆ ಎಂದು ಮುಖ್ಯಮಂತ್ರಿ ರಾಮಕೃಷ್ಣ ಹೆಗಡೆಯವರು ವಿಧಾನ ಸಭೆಯಲ್ಲಿ ನೇರವಾಗಿ ಅಪಾದಿಸಿದರು.

ಕೇಂದ್ರದ ನೀತಿಯಿಂದ ಸಂಪನ್ಮೂಲ ಹೆಚ್ಚಿಸಿಕೊಳ್ಳಲು ರಾಜ್ಯಗಳಿಗೆ ಆಗುತ್ತಿಲ್ಲ. ಕೇಂದ್ರದ ಏಕಮುಖ ನೀತಿಯಿಂದ ರಾಜ್ಯಗಳಿಗೆ ವಂಚನೆ ಆಗುತ್ತಿದೆಂದೂ ಹೆಗಡೆಯವರು ಹೇಳಿ ಇದಕ್ಕೆ ಉದಾಹರಣೆ ನೀಡುತ್ತಾ 'ಉಕ್ಕಿನ ಕಾರ್ಖಾನೆ ನಮ್ಮದು. ಆದರೆ ಉಕ್ಕಿನ ಮೇಲಿನ ಅಧಿಕಾರ ಕೇಂದ್ರಕ್ಕೆ ಸೇರಿದ್ದು ಉಕ್ಕಿನ ಮೇಲಿನ ಅಬ್ಕಾರಿ ಶುಲ್ಕ ಹೆಚ್ಚಿಸಿದಾಗ ದುಡ್ಡು ಕೇಂದ್ರಕ್ಕೆ ಹೋಯಿತು.'

'ಆದಾಯ ತೆರಿಗೆಯಲ್ಲಿ ರಾಜ್ಯಗಳಿಗೆ ಇದುವರೆಗೆ ಸಿಗುತ್ತಿದ್ದ ಪಾಲು ಶೇ73 ಆದರೆ ಈಗ ಅದು 52ಕ್ಕೆ ಇಳಿದಿದೆ,

'ಕೇಂದ್ರದ ನೇರವಾದ ತೆರಿಗೆಯಲ್ಲಿ ರಾಜ್ಯಗಳಿಗೆ ಸಿಗುತ್ತಿದ್ದ ಶೇ. 28½ ಪ್ರಮಾಣ ಈಗ 25ಕ್ಕೆ ಇಳಿದಿದೆ. ಇದರಿಂದ ನಮ್ಮ ರಾಜ್ಯಗಳಿಗೆ ರೂ. 700 ಕೋಟಿ ಮೋಸ ಆಗಿದೆ.

'ಕೇಂದ್ರದಿಂದ ಸಾಲ ತಂದು ತುಂಗಭದ್ರಾ ಯೋಜನೆ ನಿರ್ಮಿಸಲಾಯಿತು. ಆ ಸಾಲ ನಾವು ವಾಪಸ್ ಮಾಡಬೇಕು ಆದರೆ ಈ ಯೋಜನೆಯ ಆಶ್ರಯದಲ್ಲಿ ತಲಾ ಎಕ್ರೆಗೆ ರೂ. 150 ನೀರಾವರಿ ದರ ವಿಧಿಸಿ ರೈತರಿಂದ ಹಣ ವಸೂಲಿ ಮಾಡುತ್ತೇವೆ. ಆದರೆ ಈ ಒಂದು ಎಕ್ರೆಯಲ್ಲಿ ಬೆಳೆದ ಕಬ್ಬು ಹಾಗೂ ಅದರಿಂದ ಉತ್ಪಾದಿಸಲಾದ ಕಾಕಂಬಿ ಇತ್ಯಾದಿಗಳ ಮೇಲೆ ವಿಧಿಸಲಾಗುವ ಸುಂಕ ತೆರಿಗೆಯಿಂದ ಕೇಂದ್ರಕ್ಕೆ ರೂ. 3 ಸಾವಿರ ದಕ್ಕುತ್ತದೆ. ಇದು ನ್ಯಾಯವೇ' ಎಂದು ಸವಾಲು ಹಾಕಿದರು.

ಈ ಕಾರಣಗಳಿಂದಲೇ ಕೇಂದ್ರ—ರಾಜ್ಯಗಳ ಸಂಬಂಧ ಕೆಟ್ಟಿರುವುದರಿಂದ ಇದರ ಕುರಿತು ಹೊಸ ನೀತಿ ನಿರೂಪಣೆ ಬೇಕೆಂದು ಮಾರ್ಕ್ಸ್‌ವಾದಿ ಕಮ್ಯುನಿಸ್ಟ ಪಾರ್ಟಿ ಮತ್ತು ಸಿಪಿಐ (ಎಂ) ಮುಖಂಡತ್ವದ ರಾಜ್ಯ ಸರ್ಕಾರಗಳು ಹೋರಾಡುತ್ತ ಬಂದಿವೆ. ಇತರ ವಿರೋಧಿ ಪಕ್ಷಗಳ ಸರ್ಕಾರಗಳಿಗೂ ಇದರ ಅರ್ಥ ಅರಿವಾಗುತ್ತಿರುವುದು ಸ್ವಾಗತಾರ್ಹ. ಇಂಥ ಸುಲಿಗೆ ನಿಲ್ಲುವಂತೆ ಮಾಡುವುದು ಅತ್ಯಗತ್ಯ.

ಸರ್ಕಾರಿ ಕ್ಷೇತ್ರದ ಉದ್ಯಮಗಳ ದುರ್ಗತಿ

ಸರ್ಕಾರಿ ಒಡೆತನಕ್ಕೆ ಸೇರಿದ ಕೈಗಾರಿಕೆಗಳು ಮತ್ತು ವಾಣಿಜ್ಯ ಸಂಸ್ಥೆಗಳು ಕರ್ನಾಟಕದಲ್ಲಿರುವಷ್ಟು ದೇಶದ ಇನ್ನಾವ ರಾಜ್ಯದಲ್ಲೂ ಇಲ್ಲ. ಇವುಗಳು ರಾಜ್ಯದ ಬೊಕ್ಕಸಕ್ಕೆ ಹೆಚ್ಚು ಲಾಭ ಒದಗಿಸದೆ ಮಾರಕವಾಗಿವೆಯೆಂದು ಕಂಡುಬರುತ್ತದೆ.

ಕರ್ನಾಟಕ ರಾಜ್ಯದಲ್ಲಿರುವ ಒಟ್ಟು 61 ಸರ್ಕಾರೀ ಕ್ಷೇತ್ರದ ಕೈಗಾರಿಕೆಗಳ ಪೈಕಿ 28 ಕೈಗಾರಿಕೆಗಳಲ್ಲಿ ರೂ. 213 ಕೋಟಿ ಹಾನಿಯಾಗಿದೆಂದೂ 1980-81ರ ಒಂದೇ ವರ್ಷದಲ್ಲಿ ರೂ. 69 ಕೋಟಿ ಹಾನಿಯಾಗಿದೆಂದೂ ಕೈಗಾರಿಕಾ ಮಂತ್ರಿ ಬೊಮ್ಮಾಯಿಯವರು ವಿಧಾನಸಭೆಯಲ್ಲಿ ಬಹಿರಂಗಗೊಳಿಸಿದರು. ಮೂರು ಘಟಕಗಳು ದಿವಾಳಿಯಾಗಿವೆಯೆಂದೂ ಕರ್ನಾಟಕಸಾಬೂನು ಕಾರ್ಖಾನೆ ಮತ್ತು ಕರ್ನಾಟಕ ಆಹಾರ ಮತ್ತು ನಾಗರಿಕ ಪೂರೈಕೆ ಸಂಸ್ಥೆಗಳು 1980-81ರ ಲೆಕ್ಕ ಪತ್ರಗಳನ್ನು ಇನ್ನೂ ಸಿದ್ಧಪಡಿಸಿಲ್ಲೆಂದೂ ಹೇಳಿದ್ದಾರೆ. ಇದಕ್ಕೆ ಕಾರಣಗಳು ತಿಳಿದಿಲ್ಲ.

ಹಾನಿಗೊಳಗಾಗಿರುವ ಘಟಕಗಳ ಪೈಕಿ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ, ಡೈರಿ ಅಭಿವೃದ್ಧಿ ನಿಗಮಗಳು ಸೇರಿವೆ.

ಸರ್ಕಾರಿ ಒಡೆತನಕ್ಕೆ ಸೇರಿರುವ ಕೈಗಾರಿಕೆ ಮತ್ತು ನಿಗಮಗಳು ಸರಿಯಾಗಿ ಕೆಲಸ ಮಾಡತ್ತಿತ್ತು, ಅಲ್ಲಿ ನಿಯಂತ್ರಣವೆಂಬುದೇ ಇಲ್ಲ ಅನುಭವಸ್ಥ ಅಧಿಕಾರಿಗಳ ನೇಮಕಾತಿ ಇಲ್ಲ, ಅವೆಲ್ಲದುಂದು ವೆಚ್ಚ, ಭ್ರಷ್ಟಾಚಾರದ ನೆಲೆಬೀಡಾಗಿವೆಯೆಂದು ಈ ಹಿಂದೆ ಹಲವಾರು ಸಲ ವಿಧಾನಸಭೆಯ ಒಳಗೂ ಹೊರಗೂ ತೀವ್ರ ಆತಂಕ ವ್ಯಕ್ತಮಾಡಲಾಗಿತ್ತು ಆದರೆ ಸರ್ಕಾರ ಅವುಗಳನ್ನು ಕಿವಿಗೆ ಹಾಕಿಕೊಳ್ಳದೆ ರಾಜಕೀಯ ಚದುರಂಗದಾಟ ನಡೆಸುತ್ತಾ ಬಂದಿತ್ತು ಯಾರದೋ ಕೈಗಾರಿಕೆಯಲ್ಲಿ ಯಾರೋ ಉಂಡು ತಿಂದು ಮಜಾ ಮಾಡುತ್ತಿದ್ದರು. ಮಂತ್ರಿಗಳು ಅಧಿಕಾರಿಗಳಿಗೂ ಅದೇ ಸುಖ ಸಂತಸದ ನೆಲೆಗಳಾಗಿದ್ದವು.

ಸರ್ಕಾರಿ ಕ್ಷೇತ್ರದ ನಿಗಮ ಮತ್ತು ಕೈಗಾರಿಕೆಗಳು ಹಾನಿಗೊಳಗಾಗಲು ಕಾರಣವೇನೆಂದರೆ, ಜವಾಬ್ದಾರಿಹೊತ್ತ ಸಂಭಂಧಪಟ್ಟ ಘಟಕಗಳಲ್ಲಿ ಅನುಭವವಿರುವ ಅಧಿಕಾರಿಗಳನ್ನು ನೇಮಿಸುವುದಿಲ್ಲ. ಹಾಲು ಹೈನು ಅಭಿವೃದ್ಧಿ ಕಾರ್ಪೋರೇಷನ್ನಿಗೆ ನಿವೃತ್ತ ಅಥವಾ ನೌಕರಿಯಲ್ಲಿರುವ ಸಿವಿಲ್ ಇಂಜನಿಯರನ್ನು ಅಧಿಕಾರಿಯನ್ನಾಗಿಯೂ, ಸಾಬೂನು ತಯಾರಿಸುವ ಘಟಕಕ್ಕೆ ಗೃಹ ಅಥವಾ ಆರ್ಥಿಕ ಕಾರ್ಯದರ್ಶಿಯನ್ನೂ ಹಾಗೆಯೇ ಇತರ ಕಾರ್ಖಾನೆಗಳಲ್ಲಿ ಉತ್ಪಾದನೆಯಾಗುವ ವಸ್ತುಗಳ, ಉತ್ಪಾದನೆಯ ಕಚ್ಚಾ ಮಾಲುಗಳು ಕಾರ್ಮಿಕರ ಅವಸ್ಥೆಗಳ ಕುರಿತು ಪೂರ್ಣ ಅನುಭವ ತಿಳುವಳಿಕೆ ಇರುವ ಅಧಿಕಾರಿಗಳನ್ನು ನೇಮಿಸದೆ, ರಾಜಕಾರಣಕ್ಕೂ ಮಂತ್ರಿಗಳಿಗೂ ಬೇಕಾದ ತನ್ನ ಸ್ವಂತ ಲಾಭಕ್ಕಾಗಿ ಅಧಿಕಾರ ಉಪಯೋಗ ಮಾಡಿಕೊಳ್ಳುವವರನ್ನು ನೇಮಿಸಲಾಗುತ್ತದೆ.

ವಿಧಾನಸೌಧದ ಬೇರೆಬೇರೆ ಶಾಖೆಗಳಲ್ಲಿ ಕಾರ್ಯದರ್ಶಿ, ಉಪಕಾರ್ಯದರ್ಶಿಗಳಾಗಿರುವವರಿಗೆಒಂದಲ್ಲೊಂದು ಘಟಕದ ಜವಾಬ್ದಾರಿಯನ್ನಷ್ಟೇ ಅಲ್ಲ ನಾಲ್ಕೈದು ಘಟಕಗಳ ಮ್ಯಾನೇಜಿಂಗ್ ಡೈರೆಕ್ಟರರನ್ನಾಗಿ ನೇಮಿಸುವ ಪದ್ಧತಿ ಯೋಗ್ಯವಲ್ಲ. ಇತ್ತೀಚೆಗೆ ವ್ಯವಸಾಯ ಇಲಾಖೆಯ ಕಾರ್ಯದರ್ಶಿಯೊಬ್ಬರ ಪ್ರಭುತ್ವಕ್ಕೆ ಒಟ್ಟು ಎಂಟು ಉದ್ಯಮಗಳು ಮತ್ತು ನಿಗಮಗಳ ಜವಾಬ್ದಾರಿಯನ್ನು ಒಪ್ಪಿಸಿಕೊಡಲಾಗಿತ್ತು. ಹೀಗಾದ್ದಲ್ಲಿ ಘಟಕಗಳು ಹಾನಿಗೊಳಗಾಗುವುದರಲ್ಲಿ ಸಂಶಯವೇನಿದೆ?

ಸಾರ್ವಜನಿಕರಿಗೆ ನೇರವಾಗಿ ಸೇವೆ ಸಲ್ಲಿಸುವ ರಸ್ತೆಸಾರಿಗೆ, ಚರ್ಮ ಕೈಗಾರಿಕೆ, ಉಣ್ಣೆ ಅಭಿವೃದ್ಧಿ, ಹರಿಜನ-ಗಿರಿಜನರ ಅಭಿವೃದ್ಧಿ ಮುಂತಾದ 35 ಮಂಡಲಿಗಳು ಸಮಾಜಕ್ಕೆ ಪರಿಣಾಮಕಾರಿಯಾದ ಸೇವೆ ಸಲ್ಲಿಸತಕ್ಕವುಗಳು. ರಸ್ತೆ ಸಾರಿಗೆ ಸಂಸ್ಥೆಯೊಂದರಲ್ಲೇ ರೂ 10 ಕೋಟಿಗೂ ಮೇಲ್ಪಟ್ಟು ಹಾನಿಯಾಗುತ್ತಿದೆ. ಅದು ಯಾಕೆ ಹಾನಿಗೊಳಗಾಗುತ್ತಿದೆ, ಅದನ್ನು ಸರಿಪಡಿಸುವುದು ಹೇಗೆ ಎಂಬುದರ ಕುರಿತು ವಿಚಾರಣೆ ನಡೆಸಲು, ಸಂಬಂಧಪಟ್ಟವರ ಮೇಲೆ ಕ್ರಮತೆಗೆದುಕೊಳ್ಳಲು ಯಾರೂ ತಯಾರಿಲ್ಲ. ಎಲ್ಲದರಲ್ಲೂ ರಾಜಕಾರಣ ಪ್ರವೇಶಿಸುತ್ತದೆ. ಇವುಗಳನ್ನೆಲ್ಲ ಸರಿಪಡಿಸದೆ ಹಾನಿಯನ್ನು ಲಾಭವನ್ನಾಗಿ ಪರಿವರ್ತಿಸಲು ಸಾಧ್ಯವಿಲ್ಲ ಈ ದಿಸೆಯಲ್ಲಿ ಕೈಗಾರಿಕಾ ಮಂತ್ರಿಯವರು ಸರಿಯಾದ ಕ್ರಮ ಕೈಗೊಳ್ಳವುದು ಅತ್ಯಗತ್ಯ.

ಹೊಸಪೇಟೆ ನಗರಸಭೆ ನೌಕರದಾರರ ಸಭೆ

ನಗರಸಭೆ ನೌಕರದಾರರು, ಅದರಲ್ಲೂ ಪೌರ ಕಾರ್ಮಿಕರು ವಿಶಿಷ್ಟ ಸಮಸ್ಯೆಗಳನ್ನು ಎದುರಿಸುತ್ತಿದ್ದು, ಅವುಗಳ ಪರಿಹಾರಕ್ಕೆ ಬಲಿಷ್ಟವಾದ ಸಂಘಟನೆ ಕಟ್ಟುವುದು ಆಗತ್ಯವೆಂದು, ಕರ್ನಾಟಕ ರಾಜ್ಯ ನಗರಸಭೆ ನೌಕರದಾರರ ಫೆಡರೇಶನ್ನಿನ ಉಪಾಧ್ಯಕ್ಷರಾದ ಎನ್. ಕೆ. ಉಪಾಧ್ಯಾಯರು ತಾ। 25ರಂದು ಹೊಸಪೇಟೆ ನಗರಸಭೆ ನೌಕರದಾರರ ಮತ್ತು ಪೌರ ಕಾರ್ಮಿಕರನ್ನುದ್ದೇಶಿಸಿ ಭಾಷಣ ಮಾಡಿದರು ಪೌರ ಕಾರ್ಮಿಕರ ಸಮಸ್ಯೆಗಳನ್ನು ಚರ್ಚಿಸಿ ಸಂಘಟಿತ ಹೋರಾಟ ನಡೆಸಲು ಮೇ 15ರಂದು ಮೈಸೂರುನಗರದಲ್ಲಿ ರಾಜ್ಯ ಮಟ್ಟದ ಸಮಾವೇಶ ನಡೆಯಲಿದ್ದು ಅದನ್ನು ಯಶಸ್ವಿಗೊಳಿಸಲು ಕರೆಯಿತ್ತರು.

ಕುಣಿಗಲ್‌ನಲ್ಲಿ ಸೀಮೆಎಣ್ಣೆ ಕುಡಿಯುವ ನೀರಿಗಾಗಿ ಖಾಲೀ ಮಡಕೆಗಳ ಮೆರವಣಿಗೆ :

ದಿನಾಂಕ 23-3-83ರಂದು ಬುಧವಾರ ಮಾರ್ಕ್ಸ್‌ವಾದಿ ಕಮ್ಯುನಿಸ್ಟ ಪಕ್ಷದ ವತಿಯಿಂದ ಖಾಲೀ ಗಡಿಗೆಗಳ ಮೆರವಣಿಗೆಯನ್ನು ಕಾ॥ ಮಹ್ಮದ್ ದಸ್ತಗೀರ್, ಕಾ॥ ಬಡೇಸಾಬ್‌ರವರ ನೇತೃತ್ವದಲ್ಲಿ ಊರಿನ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ಹೊರಟು ಕುಣಿಗಲ್ ತಾಲ್ಲೂಕು ತಹಶೀಲ್ದಾರ್ ಅವರಿಗೆ ಸಹಸ್ರಾರು ಜನ ರುಜು ಮಾಡಿಸಿದ ಮನವಿ ಪತ್ರವನ್ನು ಅರ್ಪಿಸಲಾಯಿತು.

ಕುಡಿಯುವ ನೀರು ಮತ್ತು ಸೀಮೇಎಣ್ಣೆಯನ್ನು ಕುಣಿಗಲ್ ತಾಲ್ಲೂಕಿನಾದ್ಯಂತ ಹೆಚ್ಚಿನ ಸರಬರಾಜಾಗುವಂತೆ ಮನವಿ ಮಾಡಿಕೊಂಡಾಗ ಈ ಸಮಸ್ಯೆಗಳನ್ನು ಬಗೆಹರಿಸಿಕೊಡುವುದಾಗಿ ಭರವಸೆ ಕೊಟ್ಟನಂತರ ತಾಲ್ಲೂಕು ಕಛೇರಿಯ ಮುಂದೆ ನೆರೆದಿದ್ದ ಸಭೆಯನ್ನುದ್ದೇಶಿಸಿ ಕಾ॥ ಮಹ್ಮದ್ ದಸ್ತಗಿರ್ ಅವರು ಮಾತನಾಡುತ್ತಾ ಕುಡಿಯುವ ನೀರು ಮತ್ತು ಸೀಮೇಎಣ್ಣೆಯ ಅಗತ್ಯತೆಯನ್ನು ಒತ್ತಿ ಹೇಳುತ್ತಾ ಈ ಬಗ್ಗೆ ಸರ್ಕಾರ ಮತ್ತು ಸಂಬಂಧಪಟ್ಟ ಅಧಿಕಾರಿಗಳು ವಿಳಂಬ ಮಾಡದೆ ಕ್ರಮ ಕೈಗೊಳ್ಳಬೇಕೆಂದು ಒತ್ತಾಯಿಸಿದರು.

ದಂತಕಥೆಯಾಗಿರುವ ಕಯ್ಯೂರಿನ ಕಮ್ಯೂನಿಸ್ಟರು

'ಇಂಕ್ವಿಲಾಬ್ ಜಿಂದಾಬಾದ್'
'ಕಮ್ಯೂನಿಸ್ಟ್ ಪಾರ್ಟಿ ಜಿಂದಾಬಾದ್'
'ಸಾಮ್ರಾಜ್ಯಶಾಹಿ ನಾಶವಾಗಲಿ'
ನಾಲ್ಕನೆಯ ಘೋಷಣೆ
ಹೊರಬರುವ ಮುನ್ನವೇ
ನಾಲ್ವರ ಕುತ್ತಿಗೆಗಳೂ ಹಿಸುಕಲ್ಪಟ್ಟಿತು
ಎದೆಯಾಳದಲ್ಲಿ ತುಡಿಯುತ್ತಿದ್ದ
ಅಸಂಖ್ಯ ಶಬ್ದಗಳು
ಒಳಗೇ ಉಳಿದುಬಿಟ್ಟವು
ಕಯ್ಯೂರಿನ ಕಮ್ಯುನಿಸ್ಟರು
ಹುತಾತ್ಮರಾದರು

ಇದು ನಡೆದದ್ದು ನಾಲ್ಕು ದಶಕಗಳ ಹಿಂದೆ ಕಯ್ಯೂರಿನಲ್ಲಿ. ಕೇರಳದ ಕಣ್ಣಾನೂರು ಜಿಲ್ಲೆಯ ಹೊಸದುರ್ಗ ತಾಲ್ಲೂಕಿನ ಕಾರಿಯಂಗೋಡ್ ಹೊಳೆಯ ದಡದಲ್ಲಿರುವ ಒಂದು ಕುಗ್ರಾಮ ಕಯ್ಯೂರು. ಮುಗಿಲತ್ತ ಮೈಚಾಚಿ ನಿಂತಿರುವ ಬೋಳು ಬೆಟ್ಟಗಳೂ, ತಂಗಾಳಿಗೆ ತೊಯ್ದಾಡುವ ಭತ್ತದ ಗದ್ದೆಗಳೂ, ಸಮೃದ್ಧವಾಗಿ ಬೆಳೆದು ನಿಂತ ತೆಂಗು ಕೌಂಗುಗಳ ಹಚ್ಚ ಹಸುರಿನ ನಡುವೆ ಇದೆ ಈ ಗ್ರಾಮ.

ಅರೆಯಾಕಡವು (ದೋಣಿ ನಿಲ್ಲಿಸುವ ಜಾಗ) ಕಯ್ಯೂರಿನ ಪ್ರವೇಶದ್ವಾರ. ಒಂದು ವಯಸ್ಸಾದ ಆಲದ ಮರ. ಈ ದ್ವಾರದ ಸ್ವಾಗತಕಾರ. ತೇಜಸ್ವಿನಿಯ ಪುಟ್ಟ ಅಲೆಗಳನ್ನು ಚುಂಬಿಸುತ್ತಿರುವ ಈ ಆಲದ ಮರದ ಬೇರುಗಳು ವೀರ ಕಯ್ಯೂರಿನ ಧೀರ ಸ್ಮರಣೆಯ ಆಳಕ್ಕೆ ಇಳಿಯುತ್ತಿರುವಂತೆ ಭಾಸವಾಗುತ್ತದೆ. ಆಲದ ಮರದ ಮೇಲೆ ಸುಂಯ್‌ಗುಡುವ ಗಾಳಿ ಕಯ್ಯೂರು ಕಮ್ಯುನಿಸ್ಟರ ವೀರ ಕಾವ್ಯವನ್ನು ಹಾಡುತ್ತಿರುವಂತೆ ಅನಿಸುತ್ತದೆ. ಹುತಾತ್ಮರ ಹೆಸರುಗಳನ್ನು ಕೂಗಿ ಹೇಳುವಂತೆ ಕೇಳಿಸುತ್ತದೆ:

ಅಪ್ಪು
ಕುಂಞಂಬು
ಚಿರುಕಂಡನ್
ಅಬೂಬಕರ್

ಇವರೆಲ್ಲರೂ ಇಪ್ಪತ್ತೈದರೊಳಗಿನ ಬಿಸಿರಕ್ತದ ಯುವಕರು. ಅವಿದ್ಯಾವಂತರು. ಆದರೆ ಅವರು ತಮ್ಮ ಗ್ರಾಮದ ಜನನಾಯಕರಾದರು. ರೈತ ಸಂಘವನ್ನು ಸ್ಥಾಪಿಸಿದರು. ಸ್ಥಳೀಯ ಜಮಾನುದಾರರ ವಿರುದ್ಧವಾಗಿಯೂ, ಆಗ ನಮ್ಮ ದೇಶವನ್ನು ಆಳುತ್ತಿದ್ದ ಬ್ರಿಟಿಷ್ ಸಾಮ್ರಾಜ್ಯಶಾಹಿಗಳಿಗೆದುರಾಗಿಯೂ ಅವರು ನಡೆಸಿದ ಹೋರಾಟ ಭಾರತದ ಇತಿಹಾಸದಲ್ಲಿ ಒಂದು ಅವಿಸ್ಮರಣೀಯ ಘಟನೆ. 1937ರಲ್ಲಿ ಕಾಸರಗೋಡು ತಾಲ್ಲೂಕು ರೈತ ಸಮ್ಮೇಳನ ಸಮಾವೇಶಗೊಂಡಿತು. ಅದರ ಜೊತೆಗೆ ಕಮ್ಯುನಿಸ್ಟ್ ಪಕ್ಷದ ವಿಸ್ತೃತ ಬೆಳವಣಿಗೆ ಅದೂ ಭೂಗತ ಚಟುವಟಿಕೆಗಳ ಮೂಲಕ. ಕಮ್ಯುನಿಸ್ಟ್ ಕಾರ್ಯಕರ್ತರು ಪೋಲೀಸರ ಕ್ರೂರ ಮರ್ದನಕ್ಕೆ ತುತ್ತಾದರು. ಪೋಲೀಸರು ಕೈಗೆ ಸಿಕ್ಕಿದವರನ್ನು ಕ್ರೂರವಾಗಿ ಹಿಂಸಿಸಿದರು. ಸ್ತ್ರೀಯರ ಮಾನಭಂಗವಾಯಿತು. ಹಳ್ಳಿಗಳನ್ನು ಲೂಟಿಮಾಡಿದರು. ಕಾರ್ಯಕರ್ತರು ಸಮೀಪದ ಬೆಟ್ಟಗುಡ್ಡಗಳಲ್ಲಿ ತಲೆಮರೆಸಿಕೊಳ್ಳಬೇಕಾಯಿತು.

1941ರ ಪ್ರಾರಂಭದಲ್ಲಿ ಒಂದು ದಿನ ಕಯ್ಯೂರುಗ್ರಾಮದ ನೆರೆ ಗ್ರಾಮವಾದ ನೀಲೇಶ್ವರದಲ್ಲಿ ಜಮೀನ್ದಾರನೊಬ್ಬ ತನ್ನ ರೈತನೊಬ್ಬನನ್ನು ಜಮೀನಿಂದ ಹೊರಹಾಕಲು ನ್ಯಾಯಾಲಯದಿಂದ ಅನುಮತಿ ತಂದಾಗ ಫಸಲು ಕುಯ್ಲಿಗೆ ಸಿದ್ಧವಾಗಿತ್ತು. ಅದು ಆ ರೈತನ ಇಡೀ ವರ್ಷದ ದುಡಿಮೆಯ ಫಲ. ಅದನ್ನು ದಕ್ಕಿಸಿಕೊಳ್ಳದೆಯೇ ಆತ ಬರಿಗೈಲಿ ಹೋಗಬೇಕೆಂಬುದು ಜಮೀನ್ದಾರನ ಆಜ್ಞೆ. ಆತನ ಆಳುಗಳಿಂದ ರೈತನ ಮೇಲೆ ಬಲಪ್ರಯೋಗ. ಸುದ್ದಿ ತಿಳಿದ ರೈತ ಸಂಘದ ಕಾರ್ಯಕರ್ತರು ರೈತನ ಪರವಾಗಿ ನಿಂತರು. ಕುಯಿಲನ್ನು ಪ್ರಾರಂಭಿಸಿದರು. ಅದರ ಫಲವಾಗಿ ಅವರೆಲ್ಲರ ಮೇಲೂ ಕ್ರಿಮಿನಲ್ ಮೊಕದ್ದಮೆ. ಹೊಸದುರ್ಗದ ನ್ಯಾಯಾಧೀಶರು ಆರೋಪಿಗಳನ್ನು ಖುಲಾಸೆ ಮಾಡಿದರು.

ರೈತ ಸಂಘಕ್ಕೆ ದೊಡ್ಡ ಗೆಲುವು

1941ರ ಮಾರ್ಚ್ 12ರಂದು ರೈತ ಸಂಘ ಬಲಪ್ರದರ್ಶನದ ಮೆರವಣಿಗೆ ನಡೆಸಲು ತೀರ್ಮಾನಿಸಿತು. ಬೃಹತ್ ಮೆರವಣಿಗೆ ನಡೆಯಿತು. ಆ ದಿನ ಕಯ್ಯೂರಿನಲ್ಲಿದ್ದ ನೀಲೇಶ್ವರದ ರೆವಿನ್ಯೂ ಇನ್ಸ್‌ಪೆಕ್ಟರ್ ರೈತರ ಹೆಸರುಗಳನ್ನು ಬರೆದುಕೊಂಡ. ಏಳು ಮಂದಿ ಮುಖಂಡರ ಪಟ್ಟಿ ಸರ್ಕಾರಕ್ಕೆ ಹೋಯಿತು. ಅದರ ಪರಿಣಾಮ ಭಾರತ ರಕ್ಷಣಾ ಕಾನೂನಿನ ಅನ್ವಯ ಅವರ ಬಂಧನಕ್ಕೆ ಜಿಲ್ಲಾ ಕಲೆಕ್ಟರ್‌ನಿಂದ ವಾರಂಟ್.

ಮಾರ್ಚ್ 26ರ ರಾತ್ರಿ ಕಯ್ಯೂರಿನ ಚಹದಂಗಡಿಯ ಮೇಲೆ ಪೋಲೀಸರ ಧಾಳಿ. ಕತ್ತಲಿನ ಗಡಿಬಿಡಿಯಲ್ಲಿ ಕೈಗೆ ಸಿಕ್ಕಿದ್ದು ಇಬ್ಬರು ಮಾತ್ರ. ಇಬ್ಬರಿಗೂ ಬಲವಾದ ಏಟು ಬಿತ್ತು. ಉಳಿದವರಿಗಾಗಿ ಶೋಧನೆ ಮುಂದುವರಿಯಿತು.

27ರ ಬೆಳಿಗ್ಗೆ ಕಯ್ಯೂರು ಕುದಿಯತೊಡಗಿತು. ಹಿಂದಿನ ರಾತ್ರಿ ಪೋಲೀಸರು ಎಸಗಿದ್ದ ದೌರ್ಜನ್ಯದ ಸುದ್ದಿ ಸುತ್ತಲಿನ ಗ್ರಾಮಗಳಿಗೂ ತಲಪಿತು. ಭೂಗತರಾಗಿದ್ದವರು "ಪೋಲೀಸರ ದಬ್ಬಾಳಿಕೆಯನ್ನು ಪ್ರತಿಭಟಿಸಿ ಬೃಹತ್ ಮೆರವಣಿಗೆ ಏರ್ಪಡಿಸಬೇಕು ಹತ್ತಿರದ ಎಲ್ಲ ಹಳ್ಳಿಗಳಿಂದಲೂ ಕಾರ್ಯಕರ್ತರು ಬಂದು ಕಯ್ಯೂರಿನ ಪು.ಕಂಡಂನಲ್ಲಿ ಮಧ್ಯಾಹ್ನ 1 ಗಂಟೆಗೆ ಸೇರಬೇಕು" ಎಂಬ ಸೂಚನೆ ನೀಡಿದರು.

28ರ ಮಧ್ಯಾಹ್ನ ಜನ ಸೇರತೊಡಗಿದರು. ಒಟ್ಟು 200 ಮಂದಿ ಇದ್ದರು. ಅದರಲ್ಲಿ ನೂರು ಮಂದಿ ಸಮವಸ್ತ್ರಧಾರಿಗಳು. ಕೆಂಪು ಬಾವುಟ ಹಿಡಿದು ಮುಂಚೂಣಿಯಲ್ಲಿದ್ದುದು ಅಬೂಬಕರ್. ಮೆರವಣಿಗೆ ಚೆರಿಯಕರ ಎಂಬಲ್ಲಿಗೆ ಹೋಗಿ ಮರಳುವಾಗ ಮೆರವಣಿಗೆಯ ಸುದ್ದಿ ತಿಳಿದ ಪೋಲೀಸನೊಬ್ಬ ತನ್ನ ಸ್ವಾಮಿನಿಷ್ಠೆ ಪ್ರದರ್ಶಿಸಲು ಇದು ಸಕಾಲವೆಂದು ಭಾವಿಸಿ, ಮೆರವಣಿಗೆಯನ್ನು ತಡೆಯಲು ಧಾವಿಸಿ ಬಂದಿದ್ದ. ಅವನು ಮೆರವಣಿಗೆಯನ್ನು ಸಮೀಪಿಸಿದಾಗ ಕೆಲವರು ಇವನ ಗುರುತು ಹಿಡಿದು 'ನಿನ್ನೆ ರಾತ್ರಿ ನಮ್ಮನ್ನು ಹೊಡೆದವರ ತಂಡದಲ್ಲಿ ಇವನೂ ಇದ್ದ' ಎಂದರು ಯುವಕರು ಅವನನ್ನು ಸುತ್ತುವರಿದರು, ಬಾವುಟ ಹಿಡಿಯಬೇಕೆಂದು ಒತ್ತಾಯಿಸಿದರು. ಪೇದೆ ನಿರಾಕರಿಸಿದ ರೈತರ ಮುಷ್ಟಿಗಳು ಬಿಗಿದವು. 'ಬಾವುಟ ಹಿಡಿ ಬಾವುಟ ಹಿಡಿ' ಕೂಗು ಮುಗಿಲಿಗೇರಿತು, ದಾರಿ ಕಾಣದ ಪೋಲೀಸ್ ಬಾವುಟ ಹಿಡಿದ. ಕಯ್ಯೂರಿನ ಎಡ ದಂಡೆಯ ನದಿ ದಾಟುವ ಸ್ಥಳ ಸಮೀಪಿಸಿದಾಗ ಪೋಲೀಸನಿಗೆ ಪಾರಾಗುವ ಯೋಚನೆ. ನಡೆಯುತ್ತಿದ್ದವನು ಒಮ್ಮೆಲೇ ನಿಂತು ಬಾವುಟದ ಕೋಲನ್ನು ಮುರಿದು ಬಾವುಟವನ್ನು ಎಸೆದು, ತುಂಡುಕೋಲಿನಿಂದ ತನ್ನ ಹಿಂದೆ ಬರುತ್ತಿದ್ದ ರೈತನೊಬ್ಬನಿಗೆ ಹೊಡೆದು ನದಿಯತ್ತ ಓಡಿದ. ಪ್ರದರ್ಶನಕಾರರು ಹಿಂಬಾಲಿಸಿದಾಗ ಪೇದೆ ನದಿಯಲ್ಲಿ ಧುಮುಕಿದ, ಎದುರು ದಂಡೆಗೆ ಈಜತೊಡಗಿದ. ಸ್ವಲ್ಪ ಹೊತ್ತಿನ ನಂತರ ಕಾಣದಾದ. ಅವನ ಕೆಂಪುಟೋಪಿ ನೀರಿನಲ್ಲಿ ತೇಲಿ ಹೋಯಿತು.

ಮರುದಿನ ಪೋಲೀಸನ ಶವ ನದಿಯಲ್ಲಿ ತೇಲುವಷ್ಟರಲ್ಲೇ ಮುಖಂಡರೆಲ್ಲಾ ತಲೆ ಮರೆಸಿಕೊಂಡಿದ್ದರು. ಸಶಸ್ತ್ರ ಪೋಲೀಸ್ ಪಡೆ ಕಯ್ಯೂರಿಗೆ ಬಂದಿಳಿಯಿತು. ನರಬೇಟೆ ಆರಂಭವಾಯಿತು. ಕಮ್ಯುನಿಸ್ಟರ ಪಟ್ಟಿ ಮಾಡಬೇಕೆಂದು ಗ್ರಾಮ ಪಟೇಲರುಗಳಿಗೆ ಸರ್ಕಾರದಿಂದ ಆದೇಶ. ಜಮೀನ್ದಾರರು ಎಲ್ಲ ರೀತಿಯಲ್ಲೂ ಪೋಲೀಸರಿಗೆ ನೆರವಾದರು. 'ಗಾಂಧಿ ಸಂಘ'ದವರೆಂದು ಹೇಳಿಕೊಂಡ 'ದೇಶಭಕ್ತರು' ಸರ್ಕಾರಕ್ಕೆ ಸಹಾಯ ಹಸ್ತ ನೀಡಿದರು. ಪೋಲೀಸರ ದಮನಕಾರ್ಯ ತೀವ್ರಗೊಂಡಿತು. ಪಟ್ಟಿಯಲ್ಲಿದ್ದ ಆಪಾದಿತರೆಲ್ಲಾ ಸೆರೆಸಿಕ್ಕಿದರು.

ಮಂಗಳೂರಿನಲ್ಲಿ ಮೊಕದ್ದಮೆ ದಾಖಲು ಮಾಡಿಕೊಳ್ಳಲು ವಿಶೇಷ ಪ್ರಥಮ ದರ್ಜೆ ನ್ಯಾಯಾಧೀಶನ್ನು ಸರ್ಕಾರ ನೇಮಿಸಿತು. ಆಪಾದಿತರ ಮೇಲೆ ಹೊರಿಸಿದ್ದ ಆರೋಪಗಳು ಕೊಲೆ, ದೊಂಬಿ, ಮಾರಕ ಆಯುಧಗಳನ್ನು ಹೊಂದಿದ್ದುದು, ಸರ್ಕಾರಿ ಸೇವಕರಿಗೆ ಗಾಯ ಉಂಟುಮಾಡಿದ್ದು ಯುದ್ಧ ವಿರೋಧೀ ಕಾರ್ಯಾಚರಣೆ, ಕಮ್ಯುನಿಸ್ಟ್ ಚಟುವಟಿಕೆ, ಕ್ರಾಂತಿಗೀತೆಗಳನ್ನು ಹಾಡಿದ್ದು, ಘೋಷಣೆಗಳನ್ನು ಕೂಗಿದ್ದು ಇತ್ಯಾದಿ ಇತ್ಯಾದಿ....

1942 ಸೆಪ್ಟಂಬರ್ 27ರಂದು ನ್ಯಾಯಾಧೀಶರು ಮೊಕದ್ದಮೆಯನ್ನು ಸೆಷನ್ಸ್‌ಗೆ ವರ್ಗಾಯಿಸಿದರು. ಡಿಸೆಂಬರ್ ಮೊದಲ ದಿನ ಸೆಷನ್ಸ್‌ನಲ್ಲಿ ವಿಚಾರಣೆ ಆರಂಭವಾಯಿತು. ಆಪಾದಿತರ ಪರವಾಗಿ ವಾದಿಸಲು ಮದ್ರಾಸಿನಿಂದ ಖ್ಯಾತ ನ್ಯಾಯವಾದಿ ಎಂ. ಕೆ. ಪಿಳ್ಳೆ ಬಂದರು. ಅವರೊಡನೆ ಸಹಕರಿಸಲು ಮಂಗಳೂರಿನವರೇ ಆದ ರಂಗರಾವ್ ತಲ್ಚೇರಿಕರ್, ಶರ್ಪಾಡಿ ನರಸಪ್ಪಯ್ಯ, ವಿ. ಹಮ್ಮಬ್ಬ ಮತ್ತು ಬಿ. ಗಂಗಾಧರದಾಸ್ ಮುಂತಾದವರು ಸಿದ್ಧರಾಗಿದ್ದರು.

ವಿಚಾರಣೆ ಸಾಗಿತು. ಜೈಲಿನಿಂದ ಕೋರ್ಟಿಗೆ ಆಪಾದಿತರ ಅಲೆತ ಪ್ರಾರಂಭವಾಯಿತು. ವಾದ ಪ್ರತಿವಾದಗಳಾದವು. ಪೋಲೀಸರ ಪರ ಸಾಕ್ಷಿಗಳಿಗೆ ಸುಳ್ಳು ಹೇಳುವ ತರಬೇತಿ ನಡೆಯಿತು.

ಕೊನೆಗೊಮ್ಮೆ 1942ರ ಫೆಬ್ರವರಿ 9ರಂದು ನ್ಯಾಯಾಧೀಶ ಪಾರ್ಥಸಾರಥಿ ಅಯ್ಯರ್ ತೀರ್ಪು ಕೊಟ್ಟರು. ಐವರಿಗೆ ಗಲ್ಲು ಶಿಕ್ಷೆಯಾಯಿತು.

ಮಡತ್ತಿಲ್ ಅಪ್ಪು
ಪೊಡವರ ಕುಂಞಂಬು ಸಾಯರ್
ಕೋಯಿತಟ್ಟಿಲ್ ಚಿರುಕಂಡನ್
ಚೂರಿಕ್ಕಾಡನ್ ಕೃಷ್ಣನ ನಾಯರ್
ಪಳ್ಳಿಕಲ್ ಅಬೂಬಕರ್

ಆದರೆ ಮಕ್ಕಳ ಶಾಸನದ ಪ್ರಕಾರ ಹದಿನೈದು ವರ್ಷಕ್ಕಿಂತ ಕೆಳಗಿನವರನ್ನು ಗಲ್ಲಿಗೇರಿಸುವಂತಿಲ್ಲ. ಕೃಷ್ಣನ ನಾಯರ್ 'ಅಪ್ರಾಪ್ತ ವಯಸ್ಕ'ನಾದುದರಿಂದ ಮರಣ ದಂಡನೆ ತಪ್ಪಿತು. ಬಾಲಾಪರಾಧಿಗಳ ಶಾಲೆಗೆ ಸೇರಿಸಬೇಕೆಂದು ಸೂಚಿಸಲಾಯಿತು. ಹುತಾತ್ಮ ಪಟ್ಟಕ್ಕೆ ನಾಲ್ವರ ಮಾತ್ರ ಅರ್ಹರಾದರು. 8 ಮಂದಿಗೆ ಐದು ವರ್ಷಗಳ ಸಜೆ, 7 ಮಂದಿಗೆ ಎರಡು ವರ್ಷಗಳ ಸಜೆ, 38ಮಂದಿಯ ಖುಲಾಸೆ.

ಶಿಕ್ಷೆಗೊಳಗಾದ ಕೈದಿಗಳನ್ನು ಕಣ್ಣಾನೂರು ಸೆಂಟ್ರಲ್ ಜೈಲಿಗೆ ಕರೆದೊಯ್ದರು. ನಂತರ ಮದರಾಸ್ ಹೈಕೋರ್ಟಿಗೆ ಅಪೀಲು. ಅಲ್ಲಿ ಕೆಲವರ ಕಾರಾಗೃಹವಾಸದ ಅವಧಿಯನ್ನು ಕಡಿಮೆ ಮಾಡಿ ಉಳಿದ ದಂಡನೆಗಳನ್ನು ಖಾಯಂ ಪಡಿಸಲಾಯಿತು.

ನಂತರ ಲಂಡನ್ನಿನ ಪ್ರಿವಿ ಕೌನ್ಸಿಲ್‌ಗೆ ಅಪೀಲು. ಅಲ್ಲಿನ ಬ್ರಿಟಿಷ್ ಕಮ್ಯುನಿಸ್ಟ್ ಪಾರ್ಟಿ ತನ್ನ ಕೈಲಾದ ಮಟ್ಟಿಗೆ ನಾಲ್ಕು ತರುಣ ರೈತ ನಾಯಕರನ್ನು ಉಳಿಸಲು ಪ್ರಯತ್ನಿಸಿತು. 1942ರ ಜುಲೈನಲ್ಲಿ ಭಾರತ ಕಮ್ಯುನಿಸ್ಟ್ ಪಕ್ಷದ ಮೇಲಿನ ನಿಷೇಧ ಹಿಂತೆಗೆಯಲ್ಪಟ್ಟ ನಂತರ ಕಯ್ಯೂರು ವೀರರ ಪ್ರಾಣ ಉಳಿಸುವ ಚಳುವಳಿ ತೀವ್ರಗೊಂಡಿತು.

ಪ್ರಿವಿ ಕೌನ್ಸಿಲ್‌ನಲ್ಲಿ ಸುಪ್ರಸಿದ್ಧ ನ್ಯಾಯವಾದಿ ಡಿ. ಎನ್. ಪ್ರಿಟ್ ಮತ್ತು ಬ್ಯಾರಿಸ್ಟರ್ ವಿ. ಕೆ. ಕೃಷ್ಣಮೆನನ್ ಆಪಾದಿತರ ಪರವಾಗಿ ವಾದಿಸಿದರು. ವಾದಕ್ಕೆ ಸೋಲಾಯಿತು. ದೇಶಾದ್ಯಂತ ಅನೇಕ ಮುಖಂಡರು ಶಿಕ್ಷೆಯ ರದ್ದಿಗಾಗಿ ಸರ್ಕಾರವನ್ನು ಒತ್ತಾಯಿಸಿದರು. ಗಾಂಧೀಜಿಯವರಿಗೂ ಮನವಿ ಮಾಡಿಕೊಳ್ಳಲಾಯಿತು ಭಗತ್‌ಸಿಂಗ್‌ಗೆ ಗಲ್ಲು ಶಿಕ್ಷೆ ವಿಧಿಸಿದಾಗ ತಳೆದ ನಿಲುವನ್ನೆ ಅವರು ಈಗಲೂ

(6ನೇ ಪುಟ ನೋಡಿ)

ಹುತಾತ್ಮರ ಕೊನೆಯ ನುಡಿಗಳು

ಕುಂಞಂಬು—

"ಜನತೆಯ ಸೇವೆ ಮಾಡುವುದನ್ನು ಕಮ್ಯುನಿಸ್ಟ್ ಪಕ್ಷ ನನಗೆ ಕಲಿಸಿತು. ನಾನದನ್ನು ಸರಿಯಾಗಿ ನಿರ್ವಹಿಸಿದ್ದೇನೆಂದು ಪಾರ್ಟಿ ಭಾವಿಸಿದರೆ ನನಗಷ್ಟೇ ಸಾಕು"

ಅಪ್ಪು—

"ಪಾರ್ಟಿಯು ಶಕ್ತಿಶಾಲಿಯಾಗಿ ಬೆಳೆಯುತ್ತಿರುವುದರ ಮಹತ್ವಾದ ಸುದ್ದಿಯನ್ನು ನೀವು ತಂದಿದ್ದೀರಿ. ದೃಢ ಹೆಜ್ಜೆಯಿಂದ ನೇಣುಗಂಬವೇರಲು ಇದು ನಮಗೆ ಸ್ಫೂರ್ತಿ ನೀಡುತ್ತದೆ."

ಚಿರುಕಂಡನ್—

"ಅವರು ನಮ್ಮನ್ನು ಗಲ್ಲಿಗೇರಿಸಬಹುದು. ಆದರೆ ನಮಗೆ ಜನ ನೀಡಿರುವ ರೈತ-ಜನತೆ ಅಮರರು. ನಮಗೆ ಮರುಜನ್ಮಗಳೇನಾದರೂ ಇದ್ದಿದ್ದರೆ ನಾವು ಮತ್ತೆ ಹುಟ್ಟಿ ಮಾತೃಭೂಮಿಗಾಗಿ ಹೋರಾಡಿ ಸಾಯುತ್ತಿದ್ದೆವು"

ಅಬೂಬಕರ್—

"ನಮ್ಮ ಹಿಂದಿನ ಹುತಾತ್ಮರುಗಳಿಂದ ನಾವು ಸ್ಫೂರ್ತಿಗೊಂಡಿದ್ದೇವೆ. ಅವರೊಡನೆ ನಾವೂ ಒಬ್ಬರಾಗುವುದನ್ನು ನಾವು ನಿರೀಕ್ಷಿಸಿರಲಿಲ್ಲ. ನಾವು ಸಾವಿಗೆ ಹೆದರುತ್ತಿಲ್ಲವೆಂಬುದನ್ನು ನಮ್ಮ ಸಂಗಾತಿಗಳಿಗೆ ತಿಳಿಸಿ. ನನ್ನ ವೃದ್ಧ ತಾಯಿಯನ್ನು ಸಂತೈಸಿ. ನನ್ನ ತಮ್ಮಂದಿರನ್ನು ಪಾರ್ಟಿ ಕಾರ್ಯಕರ್ತರುಗಳನ್ನಾಗಿ ತಯಾರುಮಾಡಿ"

[ಆಗಿನ ಕಮ್ಯುನಿಸ್ಟ್ ಪಕ್ಷದ ಪ್ರಧಾನ ಕಾರ್ಯದರ್ಶಿಯಾಗಿದ್ದ ಕಾ। ಪಿ. ಸಿ. ಜೋಶಿ ಅವರು ಕಯ್ಯೂರು ವೀರರೊಂದಿಗೆ ನಡೆಸಿದ ಅಂತಿಮ ಸಂದರ್ಶನದಿಂದ.]

ಸಾಮಾಜಿಕ ಬದಲಾವಣೆಯ ಮಾರ್ಕ್ಸ್‌ವಾದೀ

ಮಾರ್ಕ್ಸ್ ಮರಣ ಶತಾಬ್ಧಿ ಲೇಖನ ಮಾಲೆ

ಲೇಖನ — 6

ಮಾರ್ಕ್ಸ್‌ವಾದವನ್ನು 'ಗಂಭೀರ' ಕಾರಣಗಳಿಂದಾಗಿ ವಿರೋಧಿಸುತ್ತೇವೆ ಎನ್ನುವವರು ಮಾರ್ಕ್ಸ್‌ವಾದದ ಬಗ್ಗೆ ಮಾಡುವ ಪ್ರಮುಖ ಟೀಕೆಯೆಂದರೆ ಅದು ಮಾನವ ಜೀವನದ ಇತರೆಲ್ಲಾ ಅಂಶಗಳನ್ನು ಸಂಪೂರ್ಣವಾಗಿ ನಿರ್ಲಕ್ಷಿಸಿ ಕೇವಲ ಆರ್ಥಿಕ ಅಂಶವನ್ನೇ ಪರಿಶೀಲಿಸುತ್ತದೆ ಎಂದು. ಆದ್ದರಿಂದ ಭಾರತದಲ್ಲಿ ಮಾರ್ಕ್ಸ್‌ವಾದ ಪ್ರಭಾವ ಬೀರಲಾರದು ಎಂಬುದು ಅವರ ವಾದ. ಕಾಂ. ಬಿ. ಟಿ. ರಣದಿವೆಯವರು ತಮ್ಮ ಈ ದೀರ್ಘ ಲೇಖನದಲ್ಲಿ ಇಂತಹ ಟೀಕೆ, ವಾದಗಳು ಹೇಗೆ ಮಾರ್ಕ್ಸ್‌ವಾದದ ಅರ್ಧಂಬರ್ಧ ತಿಳುವಳಿಕೆಯಿಂದ ಕೂಡಿವೆ, ಭಾರತದ ಇತಿಹಾಸವನ್ನು ಸರಿಯಾಗಿ ಅರಿಯಲು ಮಾರ್ಕ್ಸ್‌ವಾದ ಹೇಗೆ ಸಮರ್ಥವಾಗಿದೆ ಎಂಬುದನ್ನು ಪರಿಶೀಲಿಸಿದ್ದಾರೆ.

ಇಲ್ಲಿ ಪ್ರಕಟವಾಗುತ್ತಿರುವ ಈ ಲೇಖನದ ಮೊದಲನೆ ಕಂತಿನಲ್ಲಿ ಮಾರ್ಕ್ಸ್ ಮತ್ತು ಎಂಗೆಲ್ಸ್ ಮಾನವಜೀವನದ ಯಾವ ಅಂಶವನ್ನೂ ಮರೆಯದೆ, ಅವೆಲ್ಲವುಗಳ ನಡುವೆ ಆರ್ಥಿಕ ಕಾರಣದ ನಿರ್ಣಾಯಕ ಸ್ವಭಾವವನ್ನು ತಮ್ಮ ಬರಹಗಳ ಮೂಲಕ ಹೇಗೆ ತೋರಿಸಿಕೊಟ್ಟಿದ್ದಾರೆ ಎಂಬುದನ್ನು ಲೇಖಕರು ವಿವರಿಸಿದ್ದಾರೆ.

ಮಾರ್ಕ್ಸ್ ನಿಧನರಾಗಿ ನೂರು ವರ್ಷ ಕಳೆಯುತ್ತಿರುವಾಗ ಜಗತ್ತು ಅವರು ತನ್ನ ಸಹಯೋಗಿ ಹಾಗೂ ಇನ್ನೊಬ್ಬ ಮಹಾನ್ ಚೇತನ ಫ್ರೆಡರಿಕ್ ಎಂಗೆಲ್ಸ್‌ರೊಂದಿಗೆ ಪ್ರತಿಪಾದಿಸಿದ ಸಿದ್ಧಾಂತದ ಸದಾವಿಜಯೀ ಶಕ್ತಿಯನ್ನು ಕಾಣುತ್ತಿದೆ. ಸಾಮಾಜಿಕ ಬೆಳವಣಿಗೆ ಹಾಗೂ ಪರಿವರ್ತನೆಯ ಪ್ರಕ್ರಿಯೆಯ ಮಾರ್ಕ್ಸ್‌ವಾದೀ ತಿಳುವಳಿಕೆ ಜನರಿಗೆ ಗತಕಾಲವನ್ನು ತಿಳಿಯಲು ಮಾತ್ರವಲ್ಲ, ಸಾಮಾಜಿಕ ಬೆಳವಣಿಗೆಯ ನಿಯಮಗಳಿಗನುಸಾರವಾಗಿ ಇತಿಹಾಸವನ್ನು ರೂಪಿಸಲು ಕೂಡಾ ಅನುವು ಮಾಡಿಕೊಟ್ಟಿದೆ. ಸಮಾಜವಾದಿ ಕ್ರಾಂತಿಗಳು ಇತಿಹಾಸದಲ್ಲಿ ಪ್ರಜ್ಞಾಪೂರ್ವಕವಾಗಿ ನಿರ್ವಹಿಸಿದ ಮೊತ್ತಮೊದಲ ಕ್ರಾಂತಿಗಳಾಗಿದ್ದವು. ಈ ಕ್ರಾಂತಿಗಳ ನೇತೃತ್ವದಲ್ಲಿದ್ದ ಶಕ್ತಿಗಳಿಗೆ ತಮ್ಮ ಗುರಿ ಹಾಗೂ ಉದ್ದೇಶಗಳ ಸಂಪೂರ್ಣ ಪರಿಜ್ಞಾನವಿತ್ತು.

ಇತಿಹಾಸದ ಭೌತವಾದೀ ಸಿದ್ಧಾಂತ ತತ್ವಶಾಸ್ತ್ರ, ಧರ್ಮ, ಪರಂಪರೆ ಇತ್ಯಾದಿ ತತ್ವವಿಚಾರದ (ಭಾವನಾತ್ಮಕ–Idealogical) ಅಂಶಗಳನ್ನು ಕಡೆಗಣಿಸುತ್ತದೆ ಎಂದು ಈ ಸಿದ್ಧಾಂತದ ವಿರೋಧಿಗಳು ಟೀಕಿಸುತ್ತಿರುತ್ತಾರೆ. ಆದರೆ ಈ ಟೀಕೆ ಸರಿಯಲ್ಲ. ಎಲ್ಲಾ ಯುಗಗಳಲ್ಲೂ ಈ ಅಂಶಗಳ ಪ್ರಭಾವ ಮಾನವನ ಚಟುವಟಿಕೆಗಳ ಮೇಲೆ ಇದ್ದಿತೆಂಬುದರಲ್ಲಿ ಸಂಶಯವೇ ಇಲ್ಲ. ಮತ್ತು ಮಾರ್ಕ್ಸ್‌ವಾದದ ಸ್ಥಾಪಕರು ತಮ್ಮ ಸಿದ್ಧಾಂತವನ್ನು ಪ್ರತಿಪಾದಿಸುವಾಗ ಈ ಅಂಶಗಳನ್ನು ಗಮನಿಸಲು ಎಂದೂ ಮರೆಯಲಿಲ್ಲ. ಉತ್ಪಾದನಾ ಸಂಬಂಧಗಳಲ್ಲಿ ಬದಲಾವಣೆಯಾದಾಗಲೆಲ್ಲಾ ಮಾನವಕುಲ ತತ್ವ ವಿಚಾರಗಳ ಒಂದು ದ್ವೀಪದಿಂದ ಇನ್ನೊಂದು ದ್ವೀಪಕ್ಕೆ ತಂತಾನೇ ನೆಗೆಯಿತು. ಎಂದವರು ಭಾವಿಸಿದ್ದರೆ, ಹಳೆಯ ತತ್ವವಿಚಾರ ಹಾಗೂ ರಾಜಕೀಯ ವ್ಯವಸ್ಥೆ ಹೊಸದಕ್ಕೆ ಏನೊಂದು ಘರ್ಷಣೆಯಿಲ್ಲದೆ ಸುಲಭವಾಗಿ ದಾರಿ ಮಾಡಿಕೊಟ್ಟಿತು ಎಂದು ಭಾವಿಸಿದ್ದರೆ ಅವರು ಹಳೆಯ ಪರಿಕಲ್ಪನೆಗಳ ವಿರುದ್ಧ ಸೈದ್ಧಾಂತಿಕ ಹೋರಾಟ ನಡೆಸುತ್ತಿರಲಿಲ್ಲ; ಬಂಡವಾಳಶಾಹೀ ಪ್ರಭುತ್ವವನ್ನು ಕಿತ್ತೆಸೆದು ಕಾರ್ಮಿಕ ವರ್ಗದ ಸರ್ವಾಧಿಕಾರೀ ಪ್ರಭುತ್ವವನ್ನು ಸ್ಥಾಪಿಸಲು ಕಾರ್ಮಿಕ ವರ್ಗದ ರಾಜಕೀಯ ಪಕ್ಷ ಸಂಘಟಿಸಬೇಕೆಂದು ಕರೆ ನೀಡುತ್ತಿರಲಿಲ್ಲ. ಹೊಸದಾಗಿ ಮೂಡಿ ಬರುತ್ತಿರುವ ಸಂಬಂಧಗಳ ವಿರುದ್ಧ ಹೋರಾಟದಲ್ಲಿ ಸದ್ಯದ ಸಮಾಜದ ಹೊರರಚನೆ, ತತ್ವವಿಚಾರ ಹೇಗೆ ಸಕ್ರಿಯ ಪಾತ್ರ ವಹಿಸುತ್ತವೆ ಎಂಬುದನ್ನು ಅವರು ಪೂರ್ಣವಾಗಿ ವಿವರಿಸಿದ್ದಾರೆ. ಸದ್ಯದ ತತ್ವವಿಚಾರ ಹಾಗೂ ರಾಜಕೀಯ ಶಕ್ತಿಯ ವಿರುದ್ಧ ಹೋರಾಟ ಅನಿವಾರ್ಯ; ಏಕೆಂದರೆ ಹೊಸ ಪರಿವರ್ತನೆಯಿಂದ ತೀವ್ರ ತೊಂದರೆಗೊಳಗಾಗುವ ಪ್ರಬಲ ವರ್ಗಗಳ ಹಿತಾಸಕ್ತಿಗಳನ್ನು ಈ ಆಳುವ ಶಕ್ತಿ ಹಾಗೂ ಅದರ ತತ್ವವಿಚಾರ ಪ್ರತಿನಿಧಿಸುತ್ತವೆ ಎಂದು ಅವರು ಒತ್ತಿಹೇಳಿದ್ದಾರೆ.

ಪರಿವರ್ತನೆಯಲ್ಲಿ ಆಸಕ್ತಿ ಇರುವ, ಹಳೆಯ ವ್ಯವಸ್ಥೆಯ ವಿರುದ್ಧ ಹೋರಾಡುವ ಜನಸಾಮಾನ್ಯರು ತಕ್ಷಣ ಹಳೆಯ ಪರಿಕಲ್ಪನೆಗಳನ್ನು ತ್ಯಜಿಸುವುದಿಲ್ಲ. ಅನೇಕ ವೇಳೆ ಅವರು ಪ್ರತಿಗಾಮೀ ಹಾಗೂ ದಿಕ್ಕುಗೆಡಿಸುವ ತತ್ವವಿಚಾರಗಳಿಗೆ ಬಲಿಯಾಗುತ್ತಾರೆ. ಇದು ಅವರ ಶಕ್ತಿಯ ಕ್ರೋಢೀಕರಣಕ್ಕೆ ಅಡ್ಡಿಯುಂಟುಮಾಡಿ ಅದನ್ನು ವಿಳಂಬಗೊಳಿಸುತ್ತದೆ ಎಂದೂ ಅವರು ವಿವರಿಸಿದ್ದಾರೆ.

ಯಾವುದೇ ನಿರ್ದಿಷ್ಟ ಅಧಿಪತ್ಯದ ಸಾಮಾಜಿಕ ಪ್ರಜ್ಞೆ ಮೂಡಿ ಬರುತ್ತಿರುವ ಪರಿವರ್ತನೆಗಳನ್ನು ಮೂಕವಾಗಿ ನೋಡುತ್ತ ಕೂರುವುದಿಲ್ಲ. ಆ ಪರಿವರ್ತನೆಗಳನ್ನು ಅದು ಎದುರಿಸುತ್ತದೆ; ಹೊಸದೊಂದು ಪ್ರಜ್ಞೆ ಮೂಡಿ ಬಂದಾಗ ಅದನ್ನು ಸಕ್ರಿಯವಾಗಿ ವಿರೋಧಿಸುತ್ತದೆ.

ಮುವತ್ತು ವರ್ಷಗಳ ಸ್ವಾತಂತ್ರ್ಯ ಕೆಲವು ಅನಿವಾರ್ಯ ಆರ್ಥಿಕ ಪರಿಣಾಮಗಳನ್ನುಂಟುಮಾಡಿದೆ, ಹೀಗಿದ್ದಾಗ್ಯೂ ಭಾರತದಲ್ಲಿ ಕೋಮುವಾದ ಜಾತಿವಾದ, ರಾಷ್ಟ್ರೀಯ ಐಕ್ಯ ಪ್ರಜ್ಞೆಯ ಅಭಾವ ಇವೆಲ್ಲಾ ಕಡಿಮೆಯಾಗುವ ಬದಲು ಹೆಚ್ಚುತ್ತಿರುವುದನ್ನು ಕಂಡು ಹಲವರು ಗಲಿಬಿಲಿಗೊಳ್ಳುತ್ತಾರೆ. ಸ್ವಾತಂತ್ರ್ಯ ಹೋರಾಟದ ದೀರ್ಘ ಅವಧಿಯಲ್ಲಿ ಪ್ರಗತಿಶೀಲ ಶಕ್ತಿಗಳು ಯಾವ ಹೋರಾಟವನ್ನು ನಡೆಸಿದ್ದವೋ ಅದನ್ನು ಮತ್ತೊಮ್ಮೆ ಹೊಸದಾಗಿ ಆರಂಭಿಸಬೇಕಾಗಿದೆಯೋನೋ ಅನಿಸುತಿದೆ, ವರ್ಗ ಹೋರಾಟ ಹಾಗೂ ಮಾರ್ಕ್ಸ್‌ವಾದ ಭಾರತದ ಪರಿಸ್ಥಿತಿಯ ಮೇಲೆ ಪ್ರಭಾವ ಬೀರಿದಂತೆ ಕಾಣುವುದಿಲ್ಲ; ಧರ್ಮದ ಹಿಡಿತ ಹಾಗೂ ಕೋಮುವಾದಿ ಭಾವನೆ ಹಿಂದೆ ಇದ್ದಂತೆಯೇ ಈಗಲೂ ಇದೆ ಎಂದು ಹಲವರು ವಾದಿಸುತ್ತಾರೆ. ಭಾರತದ ಆಧ್ಯಾತ್ಮಿಕ ಪರಂಪರೆ ಹಾಗೂ ಸಂಪ್ರದಾಯ ಪಾಶ್ಚಿಮಾತ್ಯರ ಭೌತವಾದಿ ದೃಷ್ಟಿಕೋಣದ ಪ್ರಭಾವಕ್ಕೆ ಜಗ್ಗುವುದಿಲ್ಲ ಎಂಬ ಹಳೆಯ ಕಾಲದ ವಾದಗಳನ್ನು ಮತ್ತೆ ಹೂಡಲಾಗುತ್ತಿದೆ.

ಆರ್ಥಿಕ ಅಂಶ ನಿರ್ಣಾಯಕ

'ಚಾರಿತ್ರಿಕ ಭೌತವಾದ' ಎಂಬ ಶಬ್ದವನ್ನು ಪ್ರಥಮಬಾರಿಗೆ ಬಳಸುತ್ತ ಎಂಗೆಲ್ಸ್, ತನ್ನ ಕೃತಿ "ಸಮಾಜವಾದ—ಕಾಲ್ಪನಿಕ ಹಾಗೂ ವೈಜ್ಞಾನಿಕ"ದ 1892ರ ಇಂಗ್ಲೀಷ್ ಆವೃತ್ತಿಯ ವಿಶೇಷ ಮುನ್ನುಡಿಯಲ್ಲಿ ಹೀಗೆ ಹೇಳಿದ್ದಾರೆ—

'ಎಲ್ಲಾ ಚಾರಿತ್ರಿಕ ಘಟನೆಗಳ ಹಿನ್ನೆಲೆಯಲ್ಲಿರುವ ಅಂತಿಮ ಕಾರಣವನ್ನು ಮಹಾಚಾಲಕ ಶಕ್ತಿಯನ್ನು ಸಮಾಜದ ಆರ್ಥಿಕ ಬೆಳವಣಿಗೆಯಲ್ಲಿ, ಉತ್ಪಾದನೆ ಹಾಗೂ ವಿತರಣೆಯ ವಿಧಾನಗಳಲ್ಲಾಗುವ ಪರಿವರ್ತನೆಗಳಲ್ಲಿ ತತ್ಫಲವಾಗಿ ಸಮಾಜ ವಿವಿಧ ವರ್ಗಗಳಾಗಿ ವಿಭಜನೆ ಹೊಂದುವುದರಲ್ಲಿ, ಹಾಗೂ ಈ ವರ್ಗಗಳ ಪರಸ್ಪರ ಹೋರಾಟಗಳಲ್ಲಿ ಕಾಣಬೇಕು ಎನ್ನುವ ಚಾರಿತ್ರಿಕ ವಿಶ್ಲೇಷಣೆಯ ದೃಷ್ಟಿಕೋಣವನ್ನು ಹೆಸರಿಸಲು ನಾನು 'ಚಾರಿತ್ರಿಕ ಭೌತವಾದ' ಎಂಬ ಪದವನ್ನು ಇಂಗ್ಲೀಷಿನಲ್ಲಿ ಹಾಗೂ ಇತರ ಹಲವು ಭಾಷೆಗಳಲ್ಲಿ ಉಪಯೋಗಿಸಿದರೆ ಅದರಿಂದ ಬ್ರಿಟಿಷರ ಗೌರವಭಾವ ಕೂಡಾ ಧಿಗಿಲುಗೊಳ್ಳಲಿಕ್ಕಿಲ್ಲ ಎಂದು ಆಶಿಸುತ್ತೇನೆ.'

ಆರ್ಥಿಕ ಆಧಾರವೇ ಅಂತಿಮವಾಗಿ ನಿರ್ಣಾಯಕವಾಗುವ ಶಕ್ತಿ ಎಂದು ಪುನರುಚ್ಚರಿಸಿದರೂ, ಇತರ ಪ್ರಭಾವಗಳ ಪಾತ್ರವೇನೂ ಇಲ್ಲ ಎಂದು ಅದರ ಅರ್ಥವಲ್ಲ. ಆಗಸ್ಟ್ 1890ರಲ್ಲಿ ಸಿ. ಶ್ಮಿಡ್ಟ್ ಎಂಬವರಿಗೆ ಬರೆದ ಪತ್ರದಲ್ಲಿ ಎಂಗೆಲ್ಸ್ ಹೀಗೆನ್ನುತ್ತಾರೆ—

"ಅಸ್ತಿತ್ವದ ಭೌತಿಕ ವಿಧಾನವೇ ಪ್ರಾಥಮಿಕ ಕಾರಣವಾದರೂ ತತ್ವವಿಚಾರದ ಅಂಶಗಳು ಅದರ ಮೇಲೆ (ಅವುಗಳ ಪ್ರಭಾವ ಕಮ್ಮಿಯಾಗಿದ್ದರೂ) ಪ್ರತಿಕ್ರಿಯಿಸಬಾರದೆಂದೇನೂ ಇಲ್ಲ ಎಂದು ಈ ಮನುಷ್ಯ ಇನ್ನೂ ಕಂಡುಕೊಂಡಿಲ್ಲವಾದರೆ ತಾನು ಬರೆಯುತ್ತಿರುವ ವಿಷಯದ ಬಗ್ಗೆ ಆತನಿಗೆ ಏನೂ ತಿಳಿದೇ ಇಲ್ಲವೇನೋ"

ಜೆ. ಬ್ಲೋಬ್‌ರವರಿಗೆ [ಸೆಪ್ಟೆಂಬರ್ 1890ರಲ್ಲಿ] ಬರೆದ ಪತ್ರದಲ್ಲಿ ಎಂಗೆಲ್ಸ್ ಇದನ್ನು ಮತ್ತಷ್ಟು ವಿಶದೀಕರಿಸಿದ್ದಾರೆ.

"ಇತಿಹಾಸದ ಭೌತವಾದೀ ಪರಿಕಲ್ಪನೆಯ ಪ್ರಕಾರ ಇತಿಹಾಸದಲ್ಲಿ **ಅಂತಿಮವಾಗಿ** ನಿರ್ಣಾಯಕವಾಗುವ ಅಂಶವೆಂದರೆ ವಾಸ್ತವ ಜೀವನದ ಉತ್ಪಾದನೆ ಮತ್ತು ಪುನರುತ್ಪಾದನೆ. ಇದಕ್ಕಿಂತ ಹೆಚ್ಚೇನನ್ನೂ ಮಾರ್ಕ್ಸ್ ಆಗಲಿ, ನಾನಾಗಲೀ ಹೇಳಿಕೊಂಡಿಲ್ಲ. ಆದ್ದರಿಂದ ಯಾರಾದರೂ ಇದನ್ನು ತಿರುಚಿ ಆರ್ಥಿಕ ಅಂಶವೇ ಏಕಮಾತ್ರ ನಿರ್ಣಾಯಕ ಅಂಶ ಎಂದು ಹೇಳಿದರೆ, ಆತ ನಮ್ಮ ಪ್ರತಿಪಾದನೆಯನ್ನು ಒಂದು ಅರ್ಥಹೀನ, ಅಮೂರ್ತ, ಮತಿಹೀನ ಪದಗುಚ್ಛವನ್ನಾಗಿ ಮಾಡುತ್ತಾನಷ್ಟೆ. ಆರ್ಥಿಕ ಸ್ಥಿತಿಗತಿ ಆಧಾರಭೂತ ಅಂಶ. ಆದರೆ ಸಮಾಜದ ಹೊರರಚನೆಯ ವಿವಿಧ ಅಂಗಗಳು—ವರ್ಗ ಹೋರಾಟದ ರಾಜಕೀಯ ಸ್ವರೂಪ ಹಾಗೂ ಅದರ ಫಲಿತಾಂಶ, ಯಶಸ್ವೀ ಕಾದಾಟದ ನಂತರ ಜಯಶಾಲೀ ವರ್ಗ ಸ್ಥಾಪಿಸುವ ಸಂವಿಧಾನಗಳು ಇವೆಲ್ಲಾ ಚಾರಿತ್ರಿಕ ಹೋರಾಟಗಳ ಮೇಲೆ ಪ್ರಭಾವ ಬೀರುತ್ತವೆ. ಇಷ್ಟು ಮಾತ್ರವಲ್ಲ ಈ ಎಲ್ಲಾ ವಾಸ್ತವಿಕ ಹೋರಾಟಗಳು, ಅವುಗಳಲ್ಲಿ ಭಾಗವಹಿಸಿದವರ ಮಿದುಳಿನಲ್ಲಿ ಉಂಟು ಮಾಡುವ ಪ್ರತಿಬಿಂಬಗಳು, ರಾಜಕೀಯ, ನ್ಯಾಯಶಾಸ್ತ್ರೀಯ, ತಾತ್ವಿಕ ಸಿದ್ಧಾಂತಗಳು, ಧಾರ್ಮಿಕ ದೃಷ್ಟಿಕೋಣ ಮತ್ತು ಇವೇ ಬೆಳೆದು ಹುಟ್ಟಿಕೊಳ್ಳುವ ಕುರುಡು ಸಿದ್ಧಾಂತಗಳು ಇವೆಲ್ಲವೂ ಕೂಡಾ ಚಾರಿತ್ರಿಕ ಹೋರಾಟಗಳ ಮೇಲೆ ಪ್ರಭಾವ ಬೀರುತ್ತವೆ. ಹಲವು ಸಂದರ್ಭಗಳಲ್ಲಿ ಈ ಹೋರಾಟಗಳ ರಾಜಕೀಯ ಸ್ವರೂಪವನ್ನು ನಿರ್ಧರಿಸುವಲ್ಲಿಯೂ ಅವು ಮಹತ್ವದ ಸಂಗತಿಗಳಾಗಬಹುದು. ಇವೆಲ್ಲವುಗಳ ಪರಸ್ಪರ ಪ್ರತಿಕ್ರಿಯೆಗಳಲ್ಲಿ, ಅನಂತ ಆಕಸ್ಮಿಕಗಳಲ್ಲಿ [ಅಂದರೆ ವಸ್ತುಗಳ, ಘಟನೆಗಳ ನಡುವೆ ಪರಸ್ಪರ ಆಂತರಿಕ ಸಂಬಂಧಗಳುಎಷ್ಟೊಂದು ದೂರದ್ದು ಹಾಗೂ ಅವನ್ನು ಸಿದ್ಧಪಡಿಸಿ ತೋರಿಸುವುದು ಎಷ್ಟು ಕಷ್ಟದ ಕೆಲಸವೆಂದರೆ ಅಂತಹ ಸಂಬಂಧಗಳೇ ಇಲ್ಲವೇನೋ ಇದ್ದರೂ ಅದು ತೀರಾ ಅಲ್ಪವೇನೋ ಎಂದೆನಿಸುವ ಘಟನೆಗಳಲ್ಲಿ] ಅಂತಿಮವಾಗಿ ಆರ್ಥಿಕ ಚಲನೆಯೇ ತಾನು ಅಗತ್ಯ ಎಂದು ತೋರ್ಪಡಿಸಿಕೊಳ್ಳುತ್ತದೆ. ಹೀಗಿಲ್ಲದಿದ್ದರೆ ಈ ಸಿದ್ಧಾಂತವನ್ನು ಇತಿಹಾಸದ ಯಾವುದೇ ಅವಧಿಗೆ ಅನ್ವಯಿಸುವುದು ಗಣಿತದಲ್ಲಿ ಪ್ರಥಮ ಮಟ್ಟದ ಸರಳ ಸಮೀಕರಣವನ್ನು ಬಿಡಿಸುವುದಕ್ಕಿಂತ ಸುಲಭದ ಕೆಲಸವಾಗಿ ಬಿಡುತ್ತಿತ್ತು."

ಎಂಗೆಲ್ಸರು ಜೋಸೆಫ್ ಬ್ಲೋಬ್‌ರವರು ಕೇಳಿದ್ದ ಈ ಕೆಳಗಿನ ಪ್ರಶ್ನೆಗೆ ಉತ್ತರ ನೀಡುತ್ತಿದ್ದರು—

"ಇತಿಹಾಸದ ಭೌತವಾದೀ ಪರಿಕಲ್ಪನೆಯ ಪ್ರಕಾರ ವಾಸ್ತವ ಜೀವನದ ಉತ್ಪಾದನೆ ಹಾಗೂ ಪುನರುತ್ಪಾದನೆ ಇತಿಹಾಸದ ನಿರ್ಣಾಯಕ ಅಂಶ. ಈ ಪ್ರತಿಪಾದನೆಯನ್ನು ಅರ್ಥ ಮಾಡಿಕೊಳ್ಳುವುದು ಹೇಗೆ? ಆರ್ಥಿಕ ಅಂಶಗಳು ಕೇವಲ ನಿರ್ಣಾಯಕ ಅಂಶಗಳು ಮಾತ್ರವೇ ಅಥವಾ ಅದು ಒಂದು ಮಟ್ಟದವರೆಗೆ ಮಾತ್ರ ಇತರ ಸಂಬಂಧಗಳಿಗೆ ತಳಹದಿಯಾಗಿದ್ದು ತದನಂತರ ಈ ಇತರ ಸಂಬಂಧಗಳು ತಮ್ಮಷ್ಟಕ್ಕೆ ಕೂಡಾ ಕಾರ್ಯ ನಿರ್ವಹಿಸಬಲ್ಲವೇ? ಇತಿಹಾಸದಲ್ಲಿ ಸಾಕಷ್ಟು ಬಾರಿ ಶುದ್ಧ ರಾಜಕೀಯದ ರಾಜವಂಶದ ಹಾಗೂ ವೈಯುಕ್ತಿಕ ಹಿತಾಸಕ್ತಿಗಳು ಕೂಡಾ ಮಹತ್ವದ ಪಾತ್ರ ವಹಿಸಿಲ್ಲವೇ?'

ಶ್ಮಿಡ್ಟ್‌ರವರಿಗೆ (ಅಕ್ಟೋಬರ್ 1890 ರಲ್ಲಿ) ಬರೆದ ಪತ್ರದಲ್ಲಿ ಎಂಗೆಲ್ಸ್ ಹೀಗೆಂದಿದ್ದಾರೆ—

"ಆದ್ದರಿಂದ, ನಾವು ರಾಜಕೀಯ ಇತ್ಯಾದಿ ಪ್ರತಿಯೊಂದು ರೀತಿಯ ಪ್ರತಿಕ್ರಿಯೆಯನ್ನೂ, ಸ್ವತಃ ಆರ್ಥಿಕ ಚಲನೆಯ ಪ್ರತಿಬಿಂಬಗಳನ್ನೂ ಅಲ್ಲಗಳೆಯುತ್ತೇವೆ ಎಂದು ಬಾರ್ತ್‌ರವರು ಭಾವಿಸುವುದಾದರೆ ಆತ ಕೇವಲ ಗಾಳಿ ಗುದ್ದಾಟ ನಡೆಸುತ್ತಿದ್ದಾರೆ'

ಇತಿಹಾಸದ ಸೃಷ್ಟಿಕರ್ತರು, ಆದರೆ. . .

ಸಮಕಾಲೀನ ಬೆಳವಣಿಗೆಗಳನ್ನು ಅಥವಾ ಗತಕಾಲವನ್ನು ವಿಶ್ಲೇಷಿಸುವಾಗ ಮಾರ್ಕ್ಸ್ ಹಾಗೂ ಎಂಗೆಲ್ಸ್ ಎಲ್ಲಾ ಸಂಗತಿಗಳನ್ನು ಗಮನಕ್ಕೆ ತಗೊಂಡು ಆರ್ಥಿಕ ಅಂಶಕ್ಕೆ ಪ್ರಾಥಮಿಕ ಮಹತ್ವ ನೀಡಿದ್ದಾರೆ. ಅವರು ಗತಕಾಲದ ಇತಿಹಾಸವನ್ನು ವಿಶ್ಲೇಷಿಸುವಾಗ, ಒಂದೊಮ್ಮೆ ಇತಿಹಾಸದಿಂದಲೇ

ಸಿದ್ಧಾಂತದಲ್ಲಿ ತತ್ತ್ವ ವಿಚಾರಗಳ ಸ್ಥಾನ

ಬಿ. ಟಿ. ರಣದಿವೆ

ಮೂಡಿಬಂದ ಪ್ರಭುತ್ವವು ವಹಿಸುವ ಪಾತ್ರವನ್ನು ವಿಶ್ಲೇಷಿಸಲು ಎಂದೂ ಮರೆಯಲಿಲ್ಲ. ಪ್ರಭುತ್ವ ಆರ್ಥಿಕ ಬೆಳವಣಿಗೆಗಳಿಗೆ ಅನುಗುಣವಾಗಿ ಅವುಗಳ ವೇಗ ಹೆಚ್ಚಿಸುವಂತೆ ಮಾಡಬಹುದು ಅಥವಾ ಪ್ರವಾಹದ ವಿರುದ್ಧ ನಿಂತು ಅದರ ವೇಗವನ್ನು ತಗ್ಗಿಸಬಹುದು. ಅಂತಹ ಸಂದರ್ಭಗಳಲ್ಲಿ ಅದು ನುಚ್ಚುನೂರಾಗುತ್ತದೆ. ಅದು ಆರ್ಥಿಕ ಬೆಳವಣಿಗೆ ಒಂದು ನಿರ್ದಿಷ್ಟ ಹಾದಿ ಹಿಡಿಯುವುದನ್ನು ತಪ್ಪಿಸಿ ಬೇರೆ ಹಾದಿಯನ್ನು ಸೂಚಿಸಬಹುದು.

"ರಾಜಕೀಯ, ನ್ಯಾಯಶಾಸ್ತ್ರೀಯ, ತಾತ್ವಿಕ, ಧಾರ್ಮಿಕ, ಸಾಹಿತ್ಯಿಕ, ಕಲಾತ್ಮಕ, ಇತ್ಯಾದಿ ಬೆಳವಣಿಗೆಗಳೆಲ್ಲಾ ಆರ್ಥಿಕ ಬೆಳವಣಿಗೆಯ ತಳಹದಿಯ ಮೇಲೆ ನಿಂತಿವೆ. ಆದರೆ ಇವೆಲ್ಲ ಪರಸ್ಪರ ಪ್ರತಿಕ್ರಿಯೆ ಬೀರುತ್ತದೆ. ಹಾಗೂ ಆರ್ಥಿಕ ತಳಹದಿಯ ಮೇಲೂ ಪ್ರತಿಕ್ರಿಯೆ ಬೀರುತ್ತವೆ. ಆರ್ಥಿಕ ಸ್ಥಿತಿಗತಿ **ಕಾರಣ ಹಾಗೂ ಏಕಮಾತ್ರ ಸಕ್ರಿಯ** ಅಂಶ, ಬೇರೆಲ್ಲಾ ಕೇವಲ ನಿಷ್ಕ್ರಿಯ ಪರಿಣಾಮಗಳಷ್ಟೇ ಎಂದು ತಿಳಿಯಲಾಗದು. ಬದಲಿಗೆ ಅವು ಆರ್ಥಿಕ ಅಗತ್ಯವನ್ನಾಧರಿಸಿ ಪರಸ್ಪರ ಪ್ರತಿಕ್ರಿಯೆ ಬೀರುತ್ತವೆ. ಹಾಗೂ ಅಂತಿಮವಾಗಿ ಈ ಆರ್ಥಿಕ ಅಗತ್ಯವೇ ಸ್ಪಷ್ಟವಾಗಿ ಎದ್ದು ಕಾಣುತ್ತದೆ. ಉದಾಹರಣೆಗೆ ಒಂದು ಪ್ರಭುತ್ವ ರಕ್ಷಕ ಸುಂಕಗಳು, ಮುಕ್ತ ವ್ಯಾಪಾರ ಉತ್ತಮ ಅಥವಾ ಕೆಟ್ಟ ಅರ್ಥ ವ್ಯವಸ್ಥೆ ಇವೆಲ್ಲವುಗಳ ಮೂಲಕ ಪ್ರಭಾವ ಬೀರುತ್ತದೆ. 1648 ರಿಂದ 1830ರ ನಡುವಿನ ದಾರುಣ ಆರ್ಥಿಕ ಪರಿಸ್ಥಿತಿ ಜರ್ಮನ್ ಸಂಸ್ಕೃತಿ-ದ್ವೇಷಿ [Philistine] ಗಳಲ್ಲಿ ಉಂಟು ಮಾಡಿದ ಅತೀವ ದೌರ್ಬಲ್ಯ ಹಾಗೂ ನಿರ್ವೀರ್ಯತೆ ಕೂಡಾ. (ಇದು ಮೊದಲು ಧರ್ಮಭೀರುತನದಲ್ಲಿ, ನಂತರ ಭಾವುಕತೆಯಲ್ಲಿ, ಆಮೇಲೆ ರಾಜಕುಮಾರರಿಗೆ, ಪ್ರಭುಗಳಿಗೆ ಡೊಗ್ಗು ಸಲಾಮಿನ ಗುಲಾಮಿಕೆಯಲ್ಲಿ ವ್ಯಕ್ತಗೊಂಡಿತು). ಆರ್ಥಿಕ ಸ್ಥಿತಿಯಮೇಲೆ ಪರಿಣಾಮ ಬೀರದಿರದಿರಲಿಲ್ಲ. ಅದು ಪುನಶ್ಚೇತನಕ್ಕೆ ದೊಡ್ಡ ಅಡ್ಡಿಯೂ ಆಗಿತ್ತು. ಕ್ರಾಂತಿಕಾರಿ ಯುದ್ಧಗಳೂ ಹಾಗೂ ನೆಪೋಲಿಯನ್ನನ ಯುದ್ಧಗಳು ದೀರ್ಘಕಾಲದ ಆ ದಾರುಣ ಸ್ಥಿತಿಯನ್ನು ಮತ್ತಷ್ಟು ಹದಗೆಡಿಸುವವರೆಗೂ ಅದನ್ನು ಅಲುಗಾಡಿಸಲು ಸಾಧ್ಯವಾಗಿರಲಿಲ್ಲ. ಆದ್ದರಿಂದ ಕೆಲವೊಂದು ಜನ ಅಲ್ಲಲ್ಲಿ ಸುಲಭವಾಗಿ ಕಲ್ಪಿಸಿಕೊಳ್ಳುವಂತೆ ಆರ್ಥಿಕ ಸ್ಥಿತಿಗತಿ ತಾನಾಗಿಯೇ ತಕ್ಷಣ ಪರಿಣಾಮ ಬೀರುವುದಿಲ್ಲ. ಮಾನವರು ತಮ್ಮ ಇತಿಹಾಸವನ್ನು ತಾವಾಗಿಯೇ ನಿರ್ಮಿಸಿಕೊಳ್ಳುತ್ತಾರೆ. ಆದರೆ ಅವರು ಹಾಗೆ ಮಾಡುವುದು ಒಂದು ನಿರ್ದಿಷ್ಟ ಪರಿಸರದ ಮಿತಿಯೊಳಗೆ ಮತ್ತು ಆದಾಗಲೇ ಅಸ್ತಿತ್ವದಲ್ಲಿರುವ ವಾಸ್ತವ ಸಂಬಂಧಗಳ ಆಧಾರಗಳ ಮೇಲೆ, ಈ ಸಂಬಂಧಗಳಲ್ಲಿ ಆರ್ಥಿಕ ಸಂಬಂಧಗಳು ಮಾತ್ರ, ಅವು ಇತರ ರಾಜಕೀಯ, ಸೈದ್ಧಾಂತಿಕ ಇತ್ಯಾದಿ ಯಾವುದೇ ಪ್ರಭಾವಕ್ಕೊಳಗಾಗಿದ್ದರೂ ಕೂಡಾ, ಅಂತಿಮವಾಗಿ ನಿರ್ಣಾಯಕವಾಗುತ್ತವೆ. ಇದೇ ಚರಿತ್ರೆಯನ್ನು ತಿಳಿಯಲು ನೆರವಾಗುವ ಪ್ರಮುಖ ಸಂಗತಿ." ಎಂದಿದ್ದಾರೆ 1894ರಲ್ಲಿ W. ಬೋರ್ಗ್ವಿಸ್ ಎಂಬುವರಿಗೆ ಬರೆದ ಪತ್ರದಲ್ಲಿ ಎಂಗೆಲ್ಸ್]Selected Correspondence, Marx-Engals, ಪುಟ-141-42]

ಗೊಂದಲಕ್ಕೆ ಕಾರಣ

ಅದೇ ವೇಳೆ ಇನ್ನೊಂದು ವಿಷಯವನ್ನೂ ಅವರು ಗಮನಿಸಿದ್ದಾರೆ. ಅದೆಂದರೆ ಆರ್ಥಿಕ ಅಂಶಗಳ ನಿರ್ಣಾಯಕ ಮಹತ್ವವನ್ನು ಇತರರು ಯಾರೂ ಸ್ವೀಕರಿಸಲು ತಯಾರಿಲ್ಲದ ಸಮಯದಲ್ಲಿ ಮಾರ್ಕ್ಸ್ ಹಾಗೂ ತಾನು ವಿಶೇಷ ಒತ್ತುಕೊಟ್ಟು ಹೇಳಬೇಕಾಗಿ ಬಂದುದರಿಂದ ಕೆಲವೊಮ್ಮೆ ಗೊಂದಲವಾಗಿರಬಹುದು ಎಂದು ಎಂಗೆಲ್ಸರೇ ಹೇಳಿದ್ದಾರೆ.

"ಯುವಕರು ಕೆಲವೊಮ್ಮೆ ಆರ್ಥಿಕ ಅಂಶಕ್ಕೆ ಕೊಡಬೇಕಾದುದಕ್ಕಿಂತ ಹೆಚ್ಚು ಒತ್ತು ಕೊಡುತ್ತಾರೆ ಎಂಬುದು ನಿಜ. ಇದಕ್ಕೆ ಭಾಗಶಃ ಮಾರ್ಕ್ಸ್ ಮತ್ತು ನಾನೂ ಕಾರಣ. ಪ್ರಮುಖ ಸಂಗತಿಯನ್ನು ನಮ್ಮ ವಿರೋಧಿಗಳು ನಿರಾಕರಿಸುತ್ತಿದ್ದ ಸಮಯದಲ್ಲಿ ನಾವದನ್ನು ಒತ್ತಿಹೇಳಬೇಕಾಗುತ್ತಿತ್ತು. ಆದ್ದರಿಂದ ಪರಸ್ಪರ ಪ್ರತಿಕ್ರಿಯೆ ಬೀರುತ್ತಿದ್ದ ಇತರ ಅಂಶಗಳಿಗೆ ಅವಶ್ಯವಿದ್ದಷ್ಟು ಒತ್ತುಕೊಡಲು ನಮಗೆ ಅವಕಾಶವಾಗಲೀ, ಸಮಯವಾಗಲೀ ಇರಲಿಲ್ಲ. ಆದರೆ ಇತಿಹಾಸದ ಒಂದು ಅಧ್ಯಾಯವನ್ನು ಮಂಡಿಸಬೇಕಾಗಿ ಬಂದಾಗ ಅಂದರೆ ಸಿದ್ಧಾಂತವನ್ನು ಕಾರ್ಯಾಚರಣೆಗೆ ಅನ್ವಯಿಸಬೇಕಾದಾಗ ಅದು ಬೇರೆಯೇ ವಿಷಯ, ಅಲ್ಲಿ ಇಂತಹ ತಪ್ಪುಗಳಿಗೆ ಅವಕಾಶವಿಲ್ಲ."

ಇದಂತೂ ನಿಜ. ಮಾರ್ಕ್ಸ್ ಮತ್ತು ಎಂಗೆಲ್ಸ್ ಏನೇ ಬರೆದರೂ ಅದರಲ್ಲಿ ಎದ್ದು ಕಾಣುವ ಸಂಗತಿಯೆಂದರೆ ಸಂಬಂಧಪಟ್ಟ ಎಲ್ಲಾ ಅಂಶಗಳ ಆಳವಾದ ಅಧ್ಯಯನ ಮತ್ತು ಅವುಗಳಲ್ಲಿ ಆರ್ಥಿಕ ಅಂಶ ಅಂತಿಮವಾಗಿ ನಿರ್ಣಾಯಕವಾಗುವುದು. ಎಂಗೆಲ್ಸ್ ಒಮ್ಮೆ ಮಾರ್ಕ್ಸ್‌ರ **"ಲೂಯಿ ಬೊನಾಪಾರ್ಟೆಯ ಹದಿನೆಂಟನೇ ಬ್ರುಮೇರ್"**ನ್ನು ಸಿದ್ಧಾಂತವನ್ನು ಸಮಕಾಲೀನ ಬೆಳವಣಿಗೆಗಳಿಗೆ ಹೇಗೆ ಅನ್ವಯಿಸಬೇಕು ಎಂಬುದಕ್ಕೆ ಒಂದು ಅತ್ಯುತ್ತಮ ಉದಾಹರಣೆಯೆಂದಿದ್ದರು. ಇದರಲ್ಲಿ ಮಾರ್ಕ್ಸ್ ಆರ್ಥಿಕ ಮತ್ತು ಅದೇ ರೀತಿ ರಾಜಕೀಯ ಹಾಗೂ ತಾತ್ವಿಕ ಅಂಶಗಳನ್ನು ಗಣನೆಗೆ ತಗೊಂಡು ಆಗಿನ ಪರಿಸ್ಥಿತಿಯ ಮೇಲೆ ಪ್ರಭಾವ ಬೀರಿದ ವಿವಿಧ ರಾಜಕೀಯ ಪಕ್ಷಗಳ ಪಾತ್ರವನ್ನು ವಿಶ್ಲೇಷಿಸಿದ್ದಾರೆ. ಲೂಯಿ ಬೊನಾಪಾರ್ಟೆಯನ್ನು ಸರ್ವಾಧಿಕಾರಿಯಾಗಿ ಪ್ರತಿಷ್ಠಾಪಿಸುವಲ್ಲಿ ನೆಪೋಲಿಯನ್ ಪಂಥದ ಕುರಿತಾದ ಸಾಂಪ್ರದಾಯಿಕ ಪ್ರಭಾವ ರೈತರ ಮೇಲೆ ಹೇಗೆ ಕೆಲಸ ಮಾಡಿತು ಎಂಬುದನ್ನು ಅವರು ತೋರಿಸಿಕೊಟ್ಟಿದ್ದಾರೆ.

'ನೆಪೋಲಿಯನ್ ಎಂಬ ಹೆಸರಿನ ವ್ಯಕ್ತಿ ತಮಗೆ ಎಲ್ಲಾ ತರದ ಸುಖ ಸಮೃದ್ಧಿಯನ್ನು ತರುವ ಪವಾಡ ನಡೆಸುತ್ತಾನೆ ಎಂಬನಂಬಿಕೆಗೆ ಫ್ರೆಂಚ್ ರೈತರಲ್ಲಿ ಐತಿಹಾಸಿಕ ಪರಂಪರೆ ಎಡೆ ಮಾಡಿಕೊಟ್ಟಿತ್ತು. ಒಬ್ಬ ವ್ಯಕ್ತಿ ಮುಂದೆ ಬಂದು ತಾನೇ ಆ ವ್ಯಕ್ತಿ ಯಾಕೆಂದರೆ ತಾನು ನೆಪೋಲಿಯನ್ ಹೆಸರನ್ನು ಹೊಂದಿದ್ದೇನೆ ಎಂದು ಹೇಳಿಕೊಂಡ........ಐತಿಹ್ಯ ಸಾರ್ಥಕಗೊಂಡಿತು. ಆ ವ್ಯಕ್ತಿ ಫ್ರೆಂಚರ ಸಾಮ್ರಾಟನಾದ. ಆಳಿಮನ ನಿಯತ ಭಾವನೆ ಪೂರ್ಣಗೊಂಡಿತು. ಏಕಂದರೆ ಜನತೆಯ ಬಹುಸಂಖ್ಯಾತ ವರ್ಗದ ನಿಯತಭಾವನೆ ಅದೇ ಆಗಿತ್ತು.'

ಹೊರ ರಚನೆಯ ಅಧ್ಯಯನ ಕೂಡಾ

ಮಾರ್ಕ್ಸ್‌ವಾದ ಸಮಾಜದ ಹೊರ ರಚನೆಯ ಅಂಶಗಳು ಮತ್ತು ಪ್ರಜ್ಞೆ ಸಾಮಾಜಿಕ ಬದಲಾವಣೆಯನ್ನು ರೂಪಿಸುವಲ್ಲಿ, ಅಂದರೆ ಆರ್ಥಿಕ ಬದಲಾವಣೆ ಆರಂಭಿಸಿದ ಚಲನೆಯನ್ನು ಕಡಿಮೆ ಅಥವಾ ಹೆಚ್ಚು ಮಾಡುವಲ್ಲಿ ವಹಿಸುವ ಸಕ್ರಿಯ ಪಾತ್ರವನ್ನು ಗಣನೆಗೆ ತಗೆದುಕೊಳ್ಳುತ್ತದೆ. ಅದೇ ವೇಳೆ ಪ್ರಜ್ಞೆ ಹಾಗೂ ತತ್ವವಿಚಾರಗಳಲ್ಲಿ ಬದಲಾವಣೆ ಹೇಗೆ ನಡೆಯುತ್ತದೆ ಎಂಬುದನ್ನು ಅದು ಸರಿಯಾಗಿ ಅರ್ಥಮಾಡಿಕೊಳ್ಳುತ್ತದೆ..

ನ್ಯಾಯಶಾಸ್ತ್ರದ ಬಗ್ಗೆ ಬರೆಯುತ್ತಾ ಎಂಗೆಲ್ಸ್ ಹೇಳುತ್ತಾರೆ—

'ಆಧುನಿಕ ಪ್ರಭುತ್ವದಲ್ಲಿ ನ್ಯಾಯಶಾಸ್ತ್ರ ಸರ್ವೇಸಾಮಾನ್ಯವಾಗಿ ಆರ್ಥಿಕ ಸ್ಥಿತಿ-ಗತಿಗೆ ಅನುಗುಣವಾಗಿದ್ದು ಅದರ ಅಭಿವ್ಯಕ್ತಿಯಾಗಿರಬೇಕು. ಮಾತ್ರವಲ್ಲ, ಅದು ಆಂತರಿಕವಾಗಿ ಸಾಂಗತ್ಯವುಳ್ಳದ್ದು, ಅಂದರೆ ಅದು ತನ್ನ ಆಂತರಿಕ ತಿಕ್ಕಾಟಗಳಿಂದಾಗಿ ತನ್ನನ್ನೇ ತಾನು ಅಲ್ಲಗಳೆಯುವಂತಾಗಬಾರದು. ಇದನ್ನು ಸಾಧಿಸಬೇಕಾದರೆ ಅದು ಆರ್ಥಿಕ ಸ್ಥಿತಿಗತಿಯ ವಿಧೇಯ ಪ್ರತಿಫಲನವಾಗಿರಲು ಸಾಧ್ಯವಾಗುವುದಿಲ್ಲ. ನ್ಯಾಯ ಸಂಹಿತೆ ಒಂದು ವರ್ಗದ ಪ್ರಾಬಲ್ಯವನ್ನು ಒಡ್ಡೊಡ್ಡಾಗಿ, ಅವಿತವಾಗಿ, ಯಾವುದೇ ಕಲಬೆರಕೆಯಿಲ್ಲದೆ ಅಭಿವ್ಯಕ್ತಗೊಳಿಸುವುದು ಅಪರೂಪವಾದ್ದರಿಂದ (ಯಾಕೆಂದರೆ ಇದು 'ಸರಿ ಏನೆಂಬುದರ ಪರಿಕಲ್ಪನೆ'ಗೆ ಅಡ್ಡಿಯಾಗುತ್ತದೆ) ಇದು (ವಿಧೇಯಪ್ರತಿಫಲನವಾಗಿರುವುದು) ಇನ್ನಷ್ಟು ಕಷ್ಟವಾಗುತ್ತದೆ. **ನೆಪೋಲಿಯನ್ ಸಂಹಿತೆ** ಕೂಡಾ 1792-96ರಲ್ಲೇ ಕ್ರಾಂತಿಕಾರಿ ಬೂರ್ಜ್ವಾ ವರ್ಗದ ಶುದ್ಧ, ಸಾಂಗತ್ಯಪೂರ್ಣ 'ಸರಿ' ಏನೆಂಬುದರ ಪರಿಕಲ್ಪನೆ ಹಲವು ವಿಧದಲ್ಲಿ ಕಲಬೆರಕೆ ಹೊಂದಿ ದಿನೇದಿನೇ ಎಲ್ಲಾ ರೀತಿಯಲ್ಲಿ ಬಲಗುಂದುತ್ತಿತ್ತು. ಇದಕ್ಕೆ ಕಾರಣ ಕಾರ್ಮಿಕವರ್ಗದ ಹೆಚ್ಚುತ್ತಿದ್ದ ಶಕ್ತಿ ....ಈ ರೀತಿ ನ್ಯಾಯ ಶಾಸ್ತ್ರದ ಬೆಳವಣಿಗೆಯ ದಾರಿ ಸುಮಾರಾಗಿ ಇಷ್ಟೇ ಮೊದಲು ಆರ್ಥಿಕ ಸಂಬಂಧಗಳನ್ನು ನ್ಯಾಯ ಶಾಸ್ತ್ರದ ನಿಯಮಗಳಾಗಿ ನೇರವಾಗಿ ಭಾಷಾಂತರಿಸುವಾಗ ಉದ್ಭವಿಸುವ ವೈರುಧ್ಯಗಳನ್ನು ನಿವಾರಿಸಿ ಸಮರಸಪೂರ್ಣ ನ್ಯಾಯವ್ಯವಸ್ಥೆ ಸ್ಥಾಪನೆಯ ಪ್ರಯತ್ನ. ನಂತರ ಮತ್ತಷ್ಟು ಆರ್ಥಿಕ ಅಭಿವೃದ್ಧಿಯ ಅನಿವಾರ್ಯ ಪ್ರಭಾವದಿಂದಾಗಿ ಈ ವ್ಯವಸ್ಥೆಯಲ್ಲಿ ಮತ್ತೆಮತ್ತೆ ಉಂಟಾಗುವ ಭಂಗ'

Marx-Engles, correspondence, pp. 399-400)

ಕಾನೂನಿನ ಬೆಳವಣಿಗೆಯ ಈ ಪ್ರಕ್ರಿಯೆ ನ್ಯಾಯಶಾಸ್ತ್ರಜ್ಞನ ಪ್ರಜ್ಞೆಯಲ್ಲಿ ತಿರುವುಮುರುವಾದ ಸ್ವರೂಪ ಪಡೆದು, ಆತ ತಾನು ಶುದ್ಧ ಕಾನೂನಿನ ವಲಯದಲ್ಲಿ ತರ್ಕಮೂಲವಾದ ಪ್ರತಿಪಾದನೆಗಳೊಂದಿಗೆ ಮಾತಾಡುತ್ತಿದ್ದೇನೆಂದು ಭ್ರಮಿಸುತ್ತಾನೆ. ವಾಸ್ತವವಾಗಿ ಅವು ಆರ್ಥಿಕ ಅಂಶಗಳ ಪ್ರತಿಫಲನಗಳಷ್ಟೆ ಎನ್ನುತ್ತಾರೆ ಎಂಗೆಲ್ಸ್. ತಾತ್ವಿಕ (Idealogical) ದೃಷ್ಟಿಕೋನವೆನ್ನುವುದು ನಾವು ಈ ತಿರುವುಮುರುವಾದ ಸ್ವರೂಪವನ್ನೇ. ಈ ದೃಷ್ಟಿಕೋನ ಆರ್ಥಿಕ ತಳಹದಿಯ ಮೇಲೆ ಪ್ರಭಾವ ಬೀರಬಹುದು ಮತ್ತು ಒಂದು ನಿರ್ದಿಷ್ಟ ಮಿತಿಯೊಳಗೆ ಅದರಲ್ಲಿ ಸ್ವಲ್ಪ ವ್ಯತ್ಯಾಸವನ್ನೂ ಉಂಟುಮಾಡಬಹುದು. ಎಂಗೆಲ್ಸ್ ಈ ಕೆಳಗಿನ ಉದಾಹರಣೆ ಕೊಡುತ್ತಾರೆ. ಉತ್ತರಾಧಿಕಾರದ ಮೂಲ ಆರ್ಥಿಕವಾದದ್ದೇ. ಇದಕ್ಕೆ ಒಂದೇ ಶರತ್ತೆಂದರೆ ಕುಟುಂಬದ ಬೆಳವಣಿಗೆಯ ಮಟ್ಟ ಒಂದೇ ಆಗಿರಬೇಕು ಆದರೂ ಇಂಗ್ಲೆಂಡಿನಲ್ಲಿ ವಿಲುನಾಮೆ ಬರೆಯುವವನಿಗೆ ಇರುವ ಅಮಿತ ಸ್ವಾತಂತ್ರ್ಯ ಹಾಗೂ ಫ್ರಾನ್ಸಿನಲ್ಲಿ ಅಂತಹವನ ಮೇಲೆ ಹೇರುವ ತೀವ್ರ ಹಾಗೂ ವಿವರವಾದ ಮಿತಿಗಳು ಕೇವಲ ಆರ್ಥಿಕ ಕಾರಣಗಳಿಗಾಗಿ ಮಾತ್ರ ಎಂದು ಸಾಧಿಸಿ ತೋರಿಸುವುದು ಕಷ್ಟ ಆದರೆ ಇವು ಆರ್ಥಿಕ ವಲಯದಮೇಲೆ ಗಮನಾರ್ಹ ಪ್ರಭಾವ ಬೀರುತ್ತವೆ. ಯಾಕೆಂದರೆ ಆಸ್ತಿ ವಿತರಣೆಯ ಮೇಲೆ ಇವುಗಳ ಪ್ರಭಾವವಿದೆ.

(ಮುಂದುವರಿಯುವುದು)

ಬೆಂಗಳೂರು

ಹತ್ತಿ-ಗಿರಣಿ ಕಾರ್ಮಿಕರು ಹೋರಾಟದ ಕಣದಲ್ಲಿ

ಕೇಂದ್ರ ಸರ್ಕಾರದ ಸ್ವಾಮ್ಯಕ್ಕೊಳಪಟ್ಟ ಮೈಸೂರು ಸ್ಪಿನ್ನಿಂಗ್ ಅಂಡ್ ಮ್ಯಾನುಫ್ಯಾಕ್ಚರಿಂಗ್ ಮಿಲ್ಸ್ ಕಂಪನಿಯ ಮತ್ತು ಮಿನರ್ವ ಮಿಲ್ಸ್ (ಎರಡು ಮಿಲ್ಲುಗಳು ಎನ್.ಟಿ.ಸಿ.ಗೆ ಸೇರಿದೆ)ನ ಕಾರ್ಮಿಕರು ತಮ್ಮ ಬೇಡಿಕೆಗಳಿಗಾಗಿ ಹೋರಾಟ ನಿರತರಾಗಿದ್ದಾರೆ. ಕಾರ್ಮಿಕರ ಸರ್ವಿಸ್ ಗ್ರಾಚ್ಯುಟಿಯನ್ನು ಕಡಿತಗೊಳಿಸುವ ನೀತಿಯನ್ನು ಜಾರಿಗೊಳಿಸಲು ಆಡಳಿತ ವರ್ಗದವರು ಎರಡು ತಿಂಗಳ ಹಿಂದೆ ಪ್ರಯತ್ನಿಸಿದರು. ಈ ನೀತಿಯನ್ನು ಪ್ರತಿಭಟಿಸಿ ಸಿ.ಐ.ಟಿ.ಯು.ಗೆ ಸೇರಿರುವ ಎರಡು ಮಿಲ್ಲಿನ ಕಾರ್ಮಿಕರ ಸಂಘ ಮಾತುಕತೆ ನಡೆಸಲು ಪತ್ರ ಬರೆಯಿತು. ಮಾಲೀಕವರ್ಗದ ಮೊಂಡುವಾದದಿಂದ ಮಾತುಕತೆ ವಿಫಲವಾದ ನಂತರ ದಿನಾಂಕ 24-2-83ರಿಂದ ಮಿಲ್ಲಿನ ಗೇಟ್ ಮುಂದೆ ಸರದಿ ಧರಣಿ ಸತ್ಯಾಗ್ರಹವನ್ನು ಪ್ರಾರಂಭಿಸಿ 10-3-83ರಂದು ಮುಕ್ತಾಯಗೊಳಿಸಿದೆ. N.T.C. ಚೇರ್ಮನ್‌ರವರ ಕಛೇರಿಗೆ ದಿನಾಂಕ 5-3-83ರಂದು ಬೃಹತ್ ಮೆರವಣಿಗೆಯಲ್ಲಿ ಕಾರ್ಮಿಕರು ತೆರಳಿ ಮನವಿಪತ್ರ ಕೊಟ್ಟರು. ಈ ಕಾರ್ಯಕ್ರಮಗಳ ನೇತೃತ್ವವನ್ನು ಎರಡು ಮಿಲ್ಲಿನ ಕಾರ್ಮಿಕ ಸಂಘದ ಅಧ್ಯಕ್ಷ ಕಾ. ವಿ. ಜೆ. ಕೆ. ನಾಯರ್, ಮಿನರ್ವ ಮಿಲ್ಸ್‌ನ ಉಪಾಧ್ಯಕ್ಷ ಕಾ. ಟಿ. ಎಸ್. ಅನಂತರಾಂ ಅವರುಗಳು ವಹಿಸಿದ್ದರು.

ಕರ್ನಾಟಕ ವಿಧಾನ ಮಂಡಲದಲ್ಲಿ ಕಾರ್ಲ್‌ಮಾರ್ಕ್ಸ್ ಸ್ಮರಣೆ

ವೈಜ್ಞಾನಿಕ ಸಮತಾವಾದದ ಪ್ರತಿಪಾದಕ, ತತ್ವಜ್ಞಾನಿ ಕಾರ್ಲ್ ಮಾರ್ಕ್ಸ್‌ರ ಮರಣದ ನೂರನೇ ವರ್ಷಿಕೋತ್ಸವದ ಸಂದರ್ಭದಲ್ಲಿ ಜಗತ್ತಿನ ಮಾನವ ಸಮೂಹಕ್ಕೆ ಕಾರ್ಲ್‌ಮಾರ್ಕ್ಸ್‌ರು ನೀಡಿದ ಮಹಾನ್ ಕೊಡುಗೆಯನ್ನು ಕರ್ನಾಟಕ ವಿಧಾನಮಂಡಲದ ಉಭಯ ಸದನಗಳಲ್ಲೂ ಗೌರವಪೂರ್ವಕವಾಗಿ ಸ್ಮರಿಸಲಾಯಿತು.

ದಿನಾಂಕ 21ರಂದು ಸೇರಿದ್ದ ವಿಧಾನಸಭೆಯ ಅಧಿವೇಶನದಲ್ಲಿ ಕಾರ್ಲ್‌ಮಾರ್ಕ್ಸ್‌ರ ಸೇವೆಯನ್ನು ಸ್ಮರಿಸುವ ಬಗ್ಗೆ ಮುಖ್ಯಮಂತ್ರಿ ಶ್ರೀ ರಾಮಕೃಷ್ಣ ಹೆಗ್ಗಡೆ ಅವರು ವಿಶೇಷ ಗೊತ್ತುವಳಿಯೊಂದನ್ನು ಮಂಡಿಸಿದರು. ಸಿ.ಪಿ.ಐ.(ಎಂ.)ನ ಶಾಸಕರಾದ ಕಾ. ಪಿ. ರಾಮಚಂದ್ರ ರಾವ್, ಸಿ. ಪಿ. ಐ. ಶಾಸಕರಾದ ಕಾ. ಎಂ. ಎಸ್. ಕೃಷ್ಣನ್ ಅವರುಗಳು ಕಾರ್ಲ್‌ಮಾರ್ಕ್ಸ್‌ರ ಅಗಾಧವಾದ ಕೊಡುಗೆಯನ್ನು ಸ್ಮರಿಸಿದರು.

ದಿನಾಂಕ 22ರಂದು ಸೇರಿದ್ದ ವಿಧಾನಪರಿಷತ್ತಿನ ಅಧಿವೇಶನವು ಮಾನವಕೋಟಿಗೆ ತತ್ವಜ್ಞಾನಿ ಕಾರ್ಲ್‌ಮಾರ್ಕ್ಸ್‌ರ ಕೊಡುಗೆಯನ್ನು ಮುಕ್ತ ಕಂಠದಿಂದ ಪ್ರಶಂಸೆ ಮಾಡಿತು.

ದ. ಕನ್ನಡ

ಹಳ್ಳಿಗಳಿಗೆ ಕಾಲ್ನಡೆ ಜಾತಾ ಕಾರ್ಯಕ್ರಮ

ಹಳ್ಳಿಯ ಬಡಜನತೆಯನ್ನು ಸಂಪರ್ಕಿಸುವುದು, ರಾಜ್ಯದಲ್ಲಿ ಬದಲಾದ ರಾಜಕೀಯ ಪರಿಸ್ಥಿತಿಯನ್ನು ರೈತ ಸಂಘಟನೆಯ ಧ್ಯೇಯೋದ್ದೇಶಗಳನ್ನೂ ವಿವರಿಸುವುದು, ಗ್ರಾಮ ಮಟ್ಟದಿಂದಲೇ ರೈತ ಸಂಘಟನೆಗೆ ಚಾಲನೆ ನೀಡುವುದು, ಕಾರ್ಯಕರ್ತರೊಂದಿಗೆ ಅನುಭವಗಳನ್ನು ಹಂಚಿಕೊಂಡು ಅವರನ್ನು ಕ್ರಿಯಾಶೀಲರನ್ನಾಗಿ ಮಾಡುವುದು, ಪಕ್ಷದ ಹಾಗೂ ಪ್ರಗತಿಪರ ಸಾಹಿತ್ಯಗಳನ್ನು ಮಾರಾಟ ಮಾಡುವುದು, ಐಕ್ಯರಂಗ ಪತ್ರಿಕೆಗೆ ಚಂದಾದಾರರನ್ನು ಸೇರಿಸುವುದು, ಗ್ರಾಮೀಣ ಪರಿಸ್ಥಿತಿಯನ್ನು ಸೂಕ್ಷ್ಮವಾಗಿ ಅಭ್ಯಸಿಸುವುದು—ಈ ಉದ್ದೇಶಗಳನ್ನಿರಿಸಿ ದಕ್ಷಿಣ ಕನ್ನಡ ಜಿಲ್ಲೆಯ ಕೆಲವು ತಾಲ್ಲೂಕುಗಳಲ್ಲಿ ಹಳ್ಳಿಗಳಿಗೆ ಕಾಲ್ನಡೆಯಲ್ಲಿ ಜಾಥಾ ಹೋಗುವ ಕಾರ್ಯಕ್ರಮವನ್ನು ರೂಪಿಸಿಕೊಳ್ಳಲಾಗಿದೆ. ಈ ಕಾರ್ಯಕ್ರಮದ ಅಂಗವಾಗಿ ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲ್ಲೂಕಿನಲ್ಲಿ ಮಾರ್ಚ್ 6ರಿಂದ 20ರತನಕ ಹದಿನೈದು ದಿನಗಳ ಜಾಥಾ ಕಾರ್ಯಕ್ರಮವು ಯಶಸ್ವಿಯಾಗಿ ನಡೆಯಿತು. ಕರ್ನಾಟಕ ಪ್ರಾಂತ ರೈತ ಸಂಘದ ರಾಜ್ಯ ಸಮಿತಿಯು ಸದಸ್ಯತ್ವವನ್ನು ಸೇರಿಸಲು ತೆಗೆದುಕೊಂಡಿರುವ ತೀರ್ಮಾನವನ್ನು ಕಾರ್ಯಗತಗೊಳಿಸಲು ಸಹಾಯ ಮಾಡುವುದೂ ಜಾಥಾದ ಉದ್ದೇಶವಾಗಿದೆ.

ಸುಳ್ಯ ತಾಲ್ಲೂಕಿನ ಜಾಥಾದ ಕಾರ್ಯಕ್ರಮದಲ್ಲಿ ಸಂಪಾಜೆ ಗ್ರಾಮ, ತೊಡಿಕಾನ ಗ್ರಾಮ, ಸುಳ್ಯ ಗ್ರಾಮ, ಉಬರಡ್ಕ ಮಿತ್ತೂರು ಗ್ರಾಮ, ಅಮರ ಮೂಡ್ನೂರು ಗ್ರಾಮ, ನೆಲ್ಲೂರು ಕೆಮ್ರಾಜೆ ಗ್ರಾಮ, ಗುತ್ತಿಗಾರು ಗ್ರಾಮ, ನಾಲ್ಕೂರು ಗ್ರಾಮ, ಹರಿಹರ ಪಳ್ಳತಡ್ಕ ಗ್ರಾಮ, ಕೊಲ್ಲಮೊಗರು ಗ್ರಾಮ, ದೇವಚಳ್ಳ ಗ್ರಾಮ, ಜಾಲೂರು ಗ್ರಾಮ, ಕನಕಮಜಲು ಗ್ರಾಮಗಳನ್ನು ಹಾದು ಹೋಗಲಾಯಿತು. ಇವಿಷ್ಟೆ ಗ್ರಾಮಗಳಲ್ಲದೆ ಈ ಗ್ರಾಮಗಳ ನೆರೆಯ ಕೆಲವು ಗ್ರಾಮಗಳವರನ್ನು ದಾರಿಯಲ್ಲೂ ಸಭೆಗಳಲ್ಲೂ ಸಂಪರ್ಕಿಸಲಾಯಿತು. ಹದಿನೈದು ದಿನಗಳ ಕಾರ್ಯಕ್ರಮದಲ್ಲಿ ಸುಮಾರು ಒಂದು ಸಾವಿರದ ನೂರು ರೂಪಾಯಿಯ ಸಾಹಿತ್ಯದ ಮಾರಾಟವಾಯಿತು. ಅರವತ್ತಕ್ಕೂ ಮೇಲ್ಪಟ್ಟು ಐಕ್ಯರಂಗಕ್ಕೆ ಚಂದಾದಾರರನ್ನು ಸೇರಿಸಲಾಯಿತು. ದಾರಿಯುದ್ದಕ್ಕೂ ಅಲ್ಲಲ್ಲಿ ಕೆಲವು ಸಭೆಗಳನ್ನು ನಡೆಸಿದ್ದಲ್ಲದೆ ಸುಮಾರು ಮುನ್ನೂರಕ್ಕೂ ಹೆಚ್ಚಿಗೆ ಮನೆಗಳಿಗೆ ಭೇಟಿ ಕೊಡಲಾಯಿತು.

ಹಳ್ಳಿಯಿಂದ ಹಳ್ಳಿಗೆ ಕಾಲ್ನಡೆಯಲ್ಲಿ ಹೋಗುವಾಗ ಊಟ ಮತ್ತು ವಸತಿ ವ್ಯವಸ್ಥೆ ಬಡ ರೈತರ ಮತ್ತು ಕೃಷಿ ಕೂಲಿಕಾರರ ಮನೆಯಲ್ಲೇ ನಡೆಯಿತು. ಬಡವರಲ್ಲಿ ಅತೀ ಬಡವರೊಂದಿಗಿದ್ದು ಅವರೊಂದಿಗೆ ಉಂಡು ತಿಂದು ಅನುಭವಗಳನ್ನು ಹಂಚಿಕೊಳ್ಳುವುದು ಸುಡು ಬಿಸಿಲಿನಲ್ಲಿ ಧೂಳು ತುಂಬಿದ ಹಳ್ಳಿಯ ಹಾದಿಯಲ್ಲಿ ಮೈಲುಗಟ್ಟಲೆ ನಡೆದ ಆಯಾಸವನ್ನು ಪರಿಹರಿಸುತ್ತಿತ್ತು. ದಾರಿಯಲ್ಲಿ ಹರಿಯುವ ನೀರು ಕಂಡಲ್ಲಿ ಬಟ್ಟೆ ಒಗೆದು ಸ್ನಾನ ಮಾಡುವುದು, ನಗರದ ಸದ್ದುಗದ್ದಲವಿಲ್ಲದೆ ಕಾಡು ಮಾರ್ಗದಲ್ಲಿ ನಡೆಯುವುದು, ಒಂದು ತಪ್ಪಿದಲ್ಲಿ ಎರಡು ಮಿಣುಕು ದೀಪಗಳ ಬೆಳಕಿನಲ್ಲಿ ರಾತ್ರಿ ಊಟ ಮುಗಿಸಿ ವೀಳ್ಯ ಜಗಿಯುತ್ತಾ ಅನುಭವಗಳನ್ನು ಹಂಚಿಕೊಳ್ಳುವುದು ಇವೆಲ್ಲಾ ಜನತೆ ಮತ್ತು ಪ್ರಕೃತಿಯ ಸಮೀಪಕ್ಕೆ ಕೊಂಡೊಯ್ಯುವುದಕ್ಕೆ ಸಹಾಯ ಮಾಡಿದುವು. ಜಾಥಾದ ತಂಡದವರಲ್ಲಿ ಮತ್ತು ರೈತ ಸಂಘದ ಮುಖ್ಯ ಕಾರ್ಯಕರ್ತರಲ್ಲಿ ಜಾತೀಯ ಮನೋಭಾವ ಇಲ್ಲವಾಗಿತ್ತಾದರೂ ಭೇಟಿ ಕೊಟ್ಟ ಮನೆಗಳಲ್ಲಿ ಜಾತೀಯ ಸಂಪ್ರದಾಯಗಳಿದ್ದುದರಿಂದ ಕೆಲವು ಕಹಿಸನ್ನಿವೇಶಗಳನ್ನು ನೋಡಬೇಕಾಯಿತು.

ಜಾತಾದುದ್ದಕ್ಕೂ ಕಾ. ಎಂ. ಕೆ. ಯವರೊಂದಿಗೆ ತಾಲ್ಲೂಕು ರೈತ ಸಂಘದ ಪ್ರಧಾನ ಕಾರ್ಯದರ್ಶಿ ಕಾ. ಮೋನಪ್ಪ ಗೌಡ ಮತ್ತು ಕಾರ್ಯಕರ್ತ ಕಾ। ಸುಂದರ ಇದ್ದರು. ತಾಲ್ಲೂಕು ರೈತ ಸಂಘದ ಅಧ್ಯಕ್ಷ ಕಾ. ಸೂರ್ಯನಾರಾಯಣ ಭಟ್, ಉಪಾಧ್ಯಕ್ಷ ಕಾ. ಮೆಂತ್ತಡ್ಕ ರಾಮಯ್ಯ ಗೌಡ, ಕಾರ್ಯದರ್ಶಿ ಕಾ. ಎಂ. ಬಾಲಕೃಷ್ಣ ಗೌಡ, ಕಾ। ಕುಂಞಕಣ್ಣನ್. ಕಾ. ಭಾಸ್ಕರ್‌ರಾವ್, ಕಾ. ಮೊಯ್ದು, ಕಾ. ವಸಂತ್. ಕಾ. ಪಕೀರ ಪಾಟಾಳಿ, ಕಾ. ಶಿವರಾಮ, ಕಾ. ತೀರ್ಥರಾಮ, ಕಾ. ಹರಿಯಪ್ಪ, ಕಾ. ಬೊಳಿಯ, ಕಾ. ಮಾಧವ, ಕಾ. ಚನಿಯ ಮತ್ತು ಇನ್ನೂ ಬೇರೆ ಬೇರೆ ಪ್ರದೇಶಗಳ ಹಲವು ಕಾರ್ಯಕರ್ತರುಗಳು ಅಲ್ಲಲ್ಲಿ ಕೆಲವುದಿನ ಜಾಥಾದೊಂದಿಗಿದ್ದು ಅನುಭವ ಪಡೆದರು.

ಏಪ್ರಿಲ್ 15ರ ತನಕ ಪುತ್ತೂರು ತಾಲ್ಲೂಕು, ಬೆಳ್ತಂಗಡಿ ತಾಲ್ಲೂಕು ಮತ್ತು ಬಂಟ್ವಾಳ ತಾಲ್ಲೂಕುಗಳಲ್ಲೂ ಕಾ. ಎಂ. ಕೆ. ಅವರ ನೇತೃತ್ವದಲ್ಲಿ ಇದೇ ರೀತಿ ಹಳ್ಳಿಗಳಿಗೆ ಜಾಥಾ ಹೋಗುವ ಕಾರ್ಯಕ್ರಮ ಹಾಕಲಾಗಿದೆ. ಬದಲಾಗಿರುವ ರಾಜಕೀಯ ಪರಿಸ್ಥಿತಿಯ ಪ್ರಯೋಜನ ಪಡೆದು, ರೈತ ಸಂಘಟನೆಗೆ ಚಾಲನೆ ನೀಡಿ ಪ್ರಬಲ ಸಂಘಟನೆ ಮತ್ತು ಚಳುವಳಿಗಳನ್ನು ಬೆಳೆಸಿ ಕಾರ್ಮಿಕ ವರ್ಗದೊಂದಿಗೆ ಸಖ್ಯಮಾಡುವತ್ತ ಹಳ್ಳಿಯ ಬಡವರನ್ನು ಕೊಂಡೊಯ್ಯಲು ರಾಜ್ಯದ ಎಲ್ಲಾ ಕಡೆಗಳಲ್ಲೂ ಇದೇ ರೀತಿಯ ಕಾರ್ಯಕ್ರಮವನ್ನು ಸತತವಾಗಿ ನಡೆಸಲು ಪ್ರಯತ್ನಿಸುವುದು ಅವಶ್ಯ.

ವರದಿ : **ಕಾಂ. ಎಂ. ಕೆ. ಭಟ್**

ಕಯ್ಯೂರಿನ ಕಮ್ಯೂನಿಸ್ಟರು

(3ನೇ ಪುಟದಿಂದ)

ತಳೆದರು. ಪೋಸ್ಟ್ ಕಾರ್ಡ್‌ನಲ್ಲಿ 'ದೇಶಕ್ಕಾಗಿ ಇನ್ನೆಷ್ಟೋ ಜನ ಸಾಯಬೇಕಾಗುತ್ತದೆ' ಎಂಬ ವಾಕ್ಯವನ್ನು ಬರೆದು ಕಳುಹಿಸಿದರು.

1943, ಮಾರ್ಚ್ 29ರ ಸೂರ್ಯೋದಯದ ಸಮಯಕ್ಕೆ ನಾಲ್ಕು ಮಂದಿಯನ್ನು ಗಲ್ಲಿಗೇರಿಸುವುದು ನಿಶ್ಚಯವಾಯಿತು.

ಕಯ್ಯೂರು ವೀರರ ಕುಟುಂಬವರ್ಗದವರು ಅಂತಿಮ ದರ್ಶನ ಪಡೆಯಲು ಧಾವಿಸಿದರು. ಕಾರ್ಯಕರ್ತರುಗಳು ಬಂದರು. ದೇಶಾದ್ಯಂತ ಜನತೆ ಉದ್ರೇಕಗೊಂಡರು. ರಾಶಿ ರಾಶಿ ಪತ್ರಗಳು ವೀರರಿಗಾಗಿ ಬಂದವು. ಕಯ್ಯೂರ ವೀರರ ತಂದೆ, ತಾಯಿ, ಹೆಂಡತಿ, ಮಕ್ಕಳು, ಸೋದರರ ಕೊನೆಯ ಭೇಟಿ ಕಲ್ಲು ಹೃದಯವನ್ನು ಕರಗಿಸಿಬಿಡುವಂಥ ಭಾವುಕ ಸನ್ನಿವೇಶ.

1943ರ ಮಾರ್ಚ್ -29ರ ಮುಂಜಾನೆ 6 ಗಂಟೆಗೆ ಜೇಲಿನ ಕತ್ತಲ ಕೋಣೆಯೊಳಗಿಂದ ನಾಲ್ಕು ಮಂದಿ ಧೀರ ಕಮ್ಯುನಿಸ್ಟರು ನೇಣುಗಂಬದತ್ತ ನಡೆದರು. ಸರಳುಗಳ ಸಂದಿನಿಂದ ಇತರ ಕೈದಿಗಳು ಹಾಡುತ್ತಿದ್ದ ಹಾಡು ಜೇಲಿನ ಗೋಡೆಗಳಿಗೆ ಅಪ್ಪಳಿಸಿ ಪ್ರತಿಧ್ವನಿಸುತ್ತಿದ್ದವು. ಧೃಡವಾಗಿ ಅಮರತ್ವದೆಡೆಗೆ ಹೆಜ್ಜೆ ಹಾಕುತ್ತಿದ್ದ ನಾಲ್ವರೂ ನೇಣುಗಂಬದೆಡೆಗೆ ನಡೆದರು. ನಾಲ್ಕು ಮಂದಿ ಬಿಸಿರಕ್ತದ ತರುಣ ಕಮ್ಯುನಿಸ್ಟರ ಕೊರಳುಗಳನ್ನು ಬ್ರಿಟಿಷ್ ಸಾಮ್ರಾಜ್ಯಶಾಹಿ ಕ್ರೂರ ಉರುಳುಗಳು ಹಿಸುಕುತ್ತಿದ್ದಾಗ ಹುತಾತ್ಮರ ತುಟಿಗಳಂಚಿನಲ್ಲಿ 'ಕಮ್ಯುನಿಸ್ಟ್ ಪಾರ್ಟಿ ಜಿಂದಾಬಾದ್' ಘೋಷಣೆ ತುಳುಕಿತ್ತು. ಕತ್ತು ಪಕಕ್ಕೆ ವಾಲಿತು. ಕಯ್ಯೂರಿನ ವೀರ ಚರಿತೆಯ ಸಾಲುಗಳು ತಾರೆಗಳಂತೆ ಪ್ರಜ್ವಲಿಸಿದವು. ಮುಂದಿನ ಜನಾಂಗಕ್ಕೆ ದಂತಕಥೆಯಾಯಿತು.

ರೈತ ಸಂಘದ ಉದ್ಘಾಟನೆ

ದಿನಾಂಕ 27-3-83ರಂದು ಗುಡಿಬಂಡೆ ತಾಲ್ಲೂಕು ವರ್ಲಕೊಂಡ ಪಂಚಾಯಿತಿಯಲ್ಲಿ ರೈತ ಸಂಘದ ಉದ್ಘಾಟನೆಯಾಯಿತು. ಈ ತಾಲ್ಲೂಕಿನಲ್ಲಿ ಇದೇ ಪ್ರಥಮ ರೈತ ಸಂಘಟನೆಯಾಗಿದ್ದು ರೈತರು ಅತಿ ಉತ್ಸಾಹದಿಂದ ರೈತ ಸಂಘವನ್ನು ಸ್ವಾಗತಿಸಿದರು.

ಈ ಸಭೆಯಲ್ಲಿ ಕಾ। ಜಿ. ವಿ. ಶ್ರೀರಾಮ ರೆಡ್ಡಿಯವರು ಭಾಗವಹಿಸಿ ಇಂದಿನ ಪರಿಸ್ಥಿತಿಯಲ್ಲಿ ರೈತರು ಅನುಭವಿಸುತ್ತಿರುವ ಕಷ್ಟಕಾರ್ಪಣ್ಯಗಳನ್ನು ವಿವರಿಸುವುದರೊಂದಿಗೆ ಅಖಿಲ ಭಾರತ ಕಿಸಾನ್ ಸಭಾದ ಧ್ಯೇಯೋದ್ದೇಶಗಳನ್ನು ವಿವರಿಸಿದರು. ನಂತರ 7 ಜನರ ಸಮಿತಿಯೊಂದನ್ನು ಆಯ್ಕೆ ಮಾಡಲಾಯಿತು. ಕೆ. ಮುನಿಸ್ವಾಮಿ ಅಧ್ಯಕ್ಷರಾಗಿ, ಕದಿರಿ ನರಸಿಂಹಪ್ಪ ಕಾರ್ಯದರ್ಶಿಯಾಗಿ ಆಯ್ಕೆಯಾದರು.

ಹರಿಹರದಲ್ಲಿ :

ಕಾರ್ಲ್ ಮಾರ್ಕ್ಸ್ ಮರಣ ಶತಾಬ್ದಿ ದಿನಾಚರಣೆ

ತಾರೀಖು 14-3-83ರಂದು ಸಂಜೆ 6-30ಕ್ಕೆ ಸ್ಥಳೀಯ ವಾಸವಿ ಕಲ್ಯಾಣ ಮಂಟಪದಲ್ಲಿ ನಡೆದ ಕಾರ್ಲ್‌ಮಾರ್ಕ್ಸ್‌ರವರ 100ನೇ ವರ್ಷದ ಮರಣ ಶತಾಬ್ದಿ ದಿನಾಚರಣೆಯನ್ನು ಪಕ್ಷದ ಸದಸ್ಯರು ಮತ್ತು ಹಿತೈಶಿಗಳೂ ಆಚರಿಸಿದರು. ಕಾ. ವಿ.ಜಿ.ಕೆ. ನಾಯರ್‌ರವರು ಸಭೆಯನ್ನು ಉದ್ದೇಶಿಸಿ ಮಾತನಾಡಿದರು. ಕಾರ್ಮಿಕರ ಶ್ರಮವನ್ನು ಮಾಲೀಕರು ಯಾವ ರೀತಿಯಲ್ಲಿ ಹಣಕ್ಕೆ ಕೊಡುಕೊಳ್ಳುತ್ತಾರೆಂದು ಜನಕೋಟಿಗೆ ತಿಳಿಯಪಡಿಸುವುದರಲ್ಲಿ ಮಾರ್ಕ್ಸ್‌ರವರು ಯಶಸ್ವಿಯಾದರು. ಮತ್ತು ಇತಿಹಾಸದ ಗತಿಯ ನಿಯಮಗಳನ್ನು ಮಾರ್ಕ್ಸ್‌ರವರು ಕಂಡುಹಿಡಿದರು. ಎಂಬುದನ್ನು ಕಾ. ವಿ.ಜಿ.ಕೆ. ನಾಯರ್‌ರವರು ವಿವರಿಸಿದರು. ಕೊನೆಯಲ್ಲಿ ಕಾ. ಎನ್.ಸಿ. ಮಂದಾರ್‌ರವರು ವಂದನೆ ಸಲ್ಲಿಸಿದರು.

ಮಂಗಳೂರು

ಬೀಡಿ ಮಜೂರರ ಪ್ರದರ್ಶನ

ಕರ್ನಾಟಕ ರಾಜ್ಯದ ಬೀಡಿ ವರ್ಕರ್ಸ್ ಫೆಡರೇಶನ್ನಿನ ನಿರ್ಣಯದಂತೆ ತಾ॥ 24-3-83ರಂದು ಸೌತ್ ಕೆನರಾ ಬೀಡಿ ವರ್ಕರ್ಸ್ ಫೆಡರೇಶನಿನ (ಸಿ.ಐ.ಟಿ.ಯು.)ನ ಆಶ್ರಯದಲ್ಲಿ ಬೇಡಿಕೆಗಳನ್ನು ಒತ್ತಾಯಿಸಲು ಬೀಡಿ ಮಜೂರರ ಬೃಹತ್ ಪ್ರದರ್ಶನ ತಾ॥ 24-3-83ರಂದು ಮಧ್ಯಾಹ್ನ 2 ಗಂಟೆಗೆ ಕಂಕನಾಡಿಯಿಂದ ಹೊರಟು ಬೀಡಿ ಮಾಲಿಕರ ಸಂಘದ ಕಾರ್ಯದರ್ಶಿಯವರಿಗೆ ಬೇಡಿಕೆಗಳ ಮನವಿಯನ್ನು ಅರ್ಪಿಸಿತು. ಮನವಿಯನ್ನು ಸ್ವೀಕರಿಸಿ ಅದನ್ನು ಬೇಗನೆ ಇತ್ಯರ್ಥ ಮಾಡುವ ಭರವಸೆಯಿತ್ತರು. ಅನಂತರ ನೆಹರು ಮೈದಾನದಲ್ಲಿ ನಡೆದ ಸಾರ್ವಜನಿಕ ಸಭೆಯನ್ನುದ್ದೇಶಿಸಿ ಮಾತನಾಡಿದ ಫೆಡರೇಶನ್ನಿನ ಕಾರ್ಯದರ್ಶಿ ಕಾ। ಯು. ಬಿ. ಲೋಕಯ್ಯನವರು ಬೇಡಿಕೆಗಳನ್ನು ತಾ॥ 25-4-83ರೊಳಗೆ ಈಡೇರಿಸಲು, ತಪ್ಪಿದರೆ ಬೀಡಿ ಮಜೂರರು ಹೋರಾಟಕ್ಕೆ ಸಿದ್ಧರಾಗಬೇಕೆಂದರು.

ಬೇಡಿಕೆಗಳು :

(1) ತಾ॥ 1-1-83ರಿಂದ ಸಾವಿರ ಬೀಡಿ ಕಟ್ಟಿದ್ದಕ್ಕೆ ರೂ. 12 ಕೂಲಿ ಕೊಡಬೇಕು.

(2) ಶೇ. 20 ಬೋನಸ್ಸು ಸಿಗಬೇಕು.

(3) ಕಂಟ್ರಾಕ್ಟ್ ಪದ್ಧತಿ ಕೂಡಲೇ ರದ್ದಾಗಬೇಕು.

ಬೇರೆಬೇರೆ ತಾಲ್ಲೂಕುಗಳಿಂದ ಬಂದ 4,000ಕ್ಕೂ ಮಿಕ್ಕಿ ಬೀಡಿ ಮಜೂರರು ಪ್ರದರ್ಶನದಲ್ಲಿಭಾಗವಹಿಸಿದ್ದರು. ಸಭೆಯ ಅಧ್ಯಕ್ಷತೆಯನ್ನು ಜಿಲ್ಲಾ ಸಿ.ಐ.ಟಿ.ಯು. ಕಾರ್ಯದರ್ಶಿ ಕಾ. ಕೆ. ಮೂಸಬ್ಬನವರು ವಹಿಸಿದ್ದರು.

ಮೇ ೧೫ರಂದು ಮೈಸೂರಿನಲ್ಲಿ ಪೌರ ಕಾರ್ಮಿಕರ ಸಮ್ಮೇಳನ

ಕರ್ನಾಟಕ ರಾಜ್ಯಮಟ್ಟದ ಪೌರ ಕಾರ್ಮಿಕರ ಪ್ರಥಮ ಸಮ್ಮೇಳನ ದಿನಾಂಕ 15-5-83ರಂದು ಮೈಸೂರಿನಲ್ಲಿ ನಡೆಯಲಿದೆ. ಇದರ ಅಂಗವಾಗಿ ಅಧ್ಯಕ್ಷರು, ಕಾರ್ಯದರ್ಶಿಯನ್ನೊಳಗೊಂಡ 51 ಮಂದಿಯ ಸ್ವಾಗತ ಸಮಿತಿಯನ್ನು ರಚಿಸಲಾಗಿದೆ. ಸಮಿತಿಯಲ್ಲಿ ಇತರ ಸಂಘ ಸಂಸ್ಥೆಗಳಿಂದ ಚುನಾಯಿತರಾಗಿರುವ ಸದಸ್ಯರೂ ಕೂಡ ಇರುತ್ತಾರೆ. ಸ್ವಾಗತ ಸಮಿತಿಯ ಅಧ್ಯಕ್ಷರಾಗಿ ಕಾ. ಮೋಹನ್ ಕುಮಾರ್, ಉಪಾಧ್ಯಕ್ಷರುಗಳಾಗಿ ಕಾ. ಚಿಕ್ಕಮಾರಯ್ಯ ಮತ್ತು ಬಿ. ಎಸ್. ಸುಬ್ರಮಣಿ ಕಾರ್ಯದರ್ಶಿಯಾಗಿ, ಕಾ. ಸಿ. ಕೆ. ಮೋನ್ ಸಹ ಕಾರ್ಯದರ್ಶಿಗಳಾಗಿ, ಕಾ. ಎಂ. ರಾಮಚಂದ್ರ ಮತ್ತು ಖಜಾಂಚಿಯಾಗಿ ಕಾ. ಕೆ. ತಿಮ್ಮೇಗೌಡ ಚುನಾಯಿತರಾಗಿದ್ದಾರೆ.

ಈ ಸಮ್ಮೇಳನ ಯಶಸ್ವಿಯಾಗಿ ನಡೆಯಲು ರಾಜ್ಯದ ಎಲ್ಲಾ ಪೌರ ಕಾರ್ಮಿಕ ಸಂಘಗಳು ಮತ್ತು ಸಿ.ಐ.ಟಿ.ಯು.ವಿನ ನೇತೃತ್ವದ ಎಲ್ಲಾ ಸಂಘ ಸಂಸ್ಥೆಗಳು ಸಹಾಯ ಸಹಕಾರ ನೀಡಬೇಕೆಂದು ಸ್ವಾಗತ ಸಮಿತಿಯ ಕಾರ್ಯದರ್ಶಿ ಕಾ। ಸಿ. ಕೆ. ಮೋನ್ ಮನವಿ ಮಾಡಿದ್ದಾರೆ.

ಅಂತರಾಷ್ಟ್ರೀಯ :

ವಿಯೆಟ್ನಾಂ - ಧೀಮಂತ ಹೋರಾಟ, ಪ್ರಗತಿಯ ಮರು ನೆನಪು

ಹತ್ತು ವರ್ಷಗಳ ಹಿಂದೆ, 1973 ಜನವರಿ 27ರಂದು ಪ್ಯಾರಿಸ್‌ನಲ್ಲಿ ವಿಯೆಟ್ನಾಂ ವಿರುದ್ಧದ ಯುದ್ಧವನ್ನು ಕೊನೆಗೊಳಿಸಿ ಶಾಂತಿಯನ್ನು ಸ್ಥಾಪಿಸುವ ಒಪ್ಪಂದಕ್ಕೆ ಅಮೇರಿಕವು ಸಹಿ ಮಾಡಿದಾಗ ಸಾಮ್ರಾಜ್ಯಶಾಹಿ ಶಕ್ತಿಯು ದ್ವಿತೀಯಜಾಗತಿಕ ಯುದ್ಧದ ಬಳಿಕ ಶಸ್ತ್ರಗಳ ಮೂಲಕ ಸಮಾಜವಾದಿ ರಾಷ್ಟ್ರಗಳನ್ನು ನಾಶ ಮಾಡುವ ಮತ್ತು ರಾಷ್ಟ್ರೀಯ ವಿಮೋಚನಾ ಹೋರಾಟಗಳನ್ನು ಬಗ್ಗು ಬಡಿಯುವ ಪ್ರಯತ್ನದಲ್ಲಿ ಅತ್ಯಂತ ಹೀನಾಯ ಸೋಲನ್ನು ದಾಖಲಿಸಿದಂತಾಯಿತು.

1973, ಮಾರ್ಚ್ 29ರಂದು ಸೈಗಾನ್‌ನಲ್ಲಿ ಅಮೇರಿಕದ ರಾಷ್ಟ್ರ ಧ್ವಜವು ಕೆಳಗಿಳಿಸಲ್ಪಟ್ಟಿತು. ಅಮೇರಿಕದ ಸೈನ್ಯ ತುಕಡಿಯ ಕೊನೆಯ ತಂಡ ಹಡಗಿನ ಮೂಲಕ ವಿಯೆಟ್ನಾಂನಿಂದ ಕಾಲ್ಕಿತ್ತಿತು.

ವಿಯೆಟ್ನಾಂ ಜನತೆಯ ವಿರುದ್ಧದ ಯುದ್ಧವನ್ನು ಅಮೇರಿಕವು ತನ್ನ ಪ್ರತಿಷ್ಠೆಯನ್ನಾಗಿ ಪರಿಗಣಿಸಿ ತನ್ನೆಲ್ಲಾ ಶಕ್ತಿಯನ್ನು ವಿನಿಯೋಗಿಸಿತ್ತು. ವಿಯೆಟ್ನಾಂ ಮೇಲಿನ ಯುದ್ಧದಲ್ಲಿ ಅಮೇರಿಕ ಸರಕಾರವು ತನ್ನ ಭೂ ದಳದ 70 ಭಾಗ, ನೌಕಾ ಪಡೆಯ 60 ಭಾಗ ಮತ್ತು ವಾಯುದಳದ 60 ಭಾಗವನ್ನು ಬಳಸಿತ್ತು. ಅಮೆರಿಕ ಸಂಯುಕ್ತ ಸಂಸ್ಥಾನದ ಒಟ್ಟು ಮೂರು ಮಿಲಿಯ ಸೈನಿಕರು ಯುದ್ಧದಲ್ಲಿ ಭಾಗಿಗಳಾಗಿದ್ದರು. ಸುಮಾರು 2 ದಶಕಗಳಷ್ಟು ಕಾಲ ಈ ಸೈನ್ಯ ಯಂತ್ರ ವಿಯೆಟ್ನಾಂ ಮಣ್ಣಿನಲ್ಲಿ ಸಾವು ಮತ್ತು ಧ್ವಂಸವನ್ನು ಬಿತ್ತಿತ್ತು. ಪ್ರಜಾಪ್ರಭುತ್ವವಾದೀ ವಿಯೆಟ್ನಾಂ ಗಣರಾಜ್ಯದ ದಟ್ಟ ಜನಸಂದಣಿಯ ಪ್ರದೇಶಗಳು ಹಾಗೂ ಕೈಗಾರಿಕಾ ಕೇಂದ್ರಗಳ ಮೇಲೆ ತೀವ್ರ ಬಾಂಬ್ ದಾಳಿ ಮಾಡಲು, ತನ್ನ ಚುನಾವಣಾ ಭರವಸೆ ಇದ್ದಾಗ್ಯೂ, ಅಧ್ಯಕ್ಷ ನಿಕ್ಸನ್ 1972ರ ಕೊನೆಯ ಭಾಗದಲ್ಲಿ ಆದೇಶ ನೀಡಿದಾಗ ನೀಚತನದ ಯುದ್ಧವು ಪರಕಾಷ್ಠೆಯನ್ನು ಮುಟ್ಟಿತು. 1972 ಡಿಸೆಂಬರ್ ತಿಂಗಳ 12 ದಿನಗಳಲ್ಲಿ ಸಾಮ್ರಾಜ್ಯಶಾಹಿ ಶಕ್ತಿ ನಡೆಸಿದ ತೀರಾ ಬರ್ಬರವಾದ ಅಮಾನುಷ ಕೃತ್ಯಗಳನ್ನು ಜಗತ್ತು ವೀಕ್ಷಿಸಿತು. ಈ ಅಲ್ಪ ಅವಧಿಯಲ್ಲಿ ಅಮೇರಿಕವು 100,000 ಟನ್ನುಗಳಷ್ಟು ಬಾಂಬ್‌ಗಳನ್ನು ವಿಯೆಟ್ನಾಂ ಮೇಲೆ ಸುರಿಯಿತು. ವಿಯೆಟ್ನಾಂನ್ನು ಛಿದ್ರಗೊಳಿಸಲು ಇದು ಸುವರ್ಣಾವಕಾಶವೆಂದು ಶ್ವೇತಭವನದ ಯಜಮಾನರುಗಳು ಭಾವಿಸಿದ್ದರು. ಆದರೆ ವಿಯೆಟ್ನಾಂ ಧೃತಿಗೆಡದೆ ನಿಂತಿತು ಮಾತ್ರವಲ್ಲದೆ ಆಕ್ರಮಣಕಾರರನ್ನು ನುಚ್ಚುನೂರು ಮಾಡುವಂತಹ ಪ್ರತಿ ಹೊಡೆತವನ್ನು ನೀಡಿ ಹಿಮ್ಮೆಟ್ಟಿಸಿತು. ಆ ದಿನಗಳಲ್ಲಿ ಅಮೇರಿಕದ 81 ವಿಮಾನಗಳನ್ನು ಹೊಡೆದುರುಳಿಸಲಾಯಿತು. ಕೊನೆಗೂ ತನ್ನ ಸಾಹಸವು ಸಂಪೂರ್ಣವಾಗಿ ಸೋಲುತ್ತಿದೆ ಎಂಬ ಅರಿವು ಮೂಡಿದಾಗ ಒಪ್ಪಂದದ ಮಾತುಕತೆ ನಡೆಸಲು ಅಮೇರಿಕ ಮುಂದಾಯಿತು. ಕೊನೆಯವರೆಗೂ ಶಾಂತಿಯನ್ನು ನೆಲೆಗೊಳಿಸುವ ಉದ್ದೇಶವನ್ನು ಅದು ಹೊಂದಿರಲಿಲ್ಲ.

ವಿಯೆಟ್ನಾಂ ಮೇಲಿನ ತನ್ನ ಆಕ್ರಮಣಕ್ಕಾಗಿ ಅಮೇರಿಕ ಸಂಯುಕ್ತ ಸಂಸ್ಥಾನವು ಒಟ್ಟು 676,000 ಮಿಲಿಯ ಡಾಲರ್ ವೆಚ್ಚ ಮಾಡಿತ್ತು. ವಿಯೆಟ್ನಾಂ ಪ್ರಾಂತ್ಯದೊಳಗಡೆ ಸುಮಾರು 4,200 ಅಮೇರಿಕದ ವಿಮಾನಗಳು ಹೊಡೆದು ಕೆಡವಲ್ಪಟ್ಟವು. ಅಧಿಕೃತ ಲೆಕ್ಕಾಚಾರದ ರೀತ್ಯ ಯುದ್ಧದಲ್ಲಿ ಅಮೇರಿಕದ 50,000 ಸೈನಿಕರು ಸತ್ತರು. 300,000 ಸೈನಿಕರು ಗಾಯಗೊಂಡರು.

ಯುದ್ಧ ವರ್ಷಗಳಲ್ಲಿ ಏಳು ಮಿಲಿಯ ಟನ್ನಿನಷ್ಟು ಬಾಂಬ್‌ಗಳನ್ನು ವಿಯೆಟ್ನಾಂ ಪ್ರಾಂತ್ಯದೊಳಗೆ ಹಾಕಲಾಯಿತು. ಇದು ಎರಡನೇ ಜಾಗತಿಕ ಯುದ್ಧದಲ್ಲಿ ಉಪಯೋಗಿಸಿದ ಬಾಂಬಿನ ಮೂರರಷ್ಟಾಗುತ್ತದೆ. ರಾಷ್ಟ್ರದ ದಕ್ಷಿಣ ಭಾಗದಲ್ಲಿ 60 ಶೇಕಡ ಹಳ್ಳಿಗಳು ಸಂಪೂರ್ಣ ನಾಶವಾದವು, 50 ಮಿಲಿಯ ಹೆಕ್ಟೇರಿನಷ್ಟು ಅರಣ್ಯ ಪ್ರದೇಶ ಧ್ವಂಸವಾದವು ಮತ್ತು 1.5 ಮಿಲಿಯದಷ್ಟು ಜನತೆ ಸಾವಿಗೀಡಾದರು. ರಾಷ್ಟ್ರದ ಆ ಭಾಗದಲ್ಲಿ ಒಂದು ಮಿಲಿಯ ಹೆಂಗಸರು ತಮ್ಮ ಗಂಡಂದಿರನ್ನು ಕಳಕೊಂಡರು. 800,000 ಮಕ್ಕಳು ಅನಾಥರಾದರು. ಉತ್ತರ ಭಾಗದಲ್ಲಿ ಹೆಚ್ಚು ಕಡಿಮೆ ಎಲ್ಲಾ ಪಟ್ಟಣಗಳು ಮತ್ತು ಪ್ರಾಂತ್ಯ ಕೇಂದ್ರಗಳು ನಾಶವಾದವು. 3,000 ಶಾಲೆಗಳು, 350 ಆಸ್ಪತ್ರೆಗಳು, 530 ದೇವಾಲಯಗಳು, ಚೀನಿ ಮಾದರಿ ಗುಡಿಗಳು, ಚಾರಿತ್ರಿಕ ಸ್ಮಾರಕಗಳು ಹಾಳುಗೆಡವಲ್ಪಟ್ಟವು.

ವಿಯೆಟ್ನಾಂ ನೆಲದ ಮೇಲೆ ಅಮೇರಿಕದ ಸೈನ್ಯ ನಡೆಸಿದ ಪಾತಕಿ ಕೃತ್ಯದ ಗುರುತುಗಳು ಇಂದಿಗೂ ಮಾಸದೆ ಉಳಿದಿದೆ. ಅನಾರೋಗ್ಯ ಮತ್ತು ಅಂಗವಿಕಲ ಜನತೆ, ಸುಟ್ಟು ನಾಶವಾದ ಅರಣ್ಯ ಸಂಪತ್ತು ಮತ್ತು ಬರಡಾದ ನೆಲ - ಇವುಗಳು ರಸಾಯನಾಸ್ತ್ರದ ಕ್ರೂರತೆಯ ಪ್ರತೀಕವಾಗಿದೆ. ಅಮೇರಿಕದ ತಂತ್ರಜ್ಞರ ಹೇಳಿಕೆಯಂತೆ ವಿಯೆಟ್ನಾಂ ನೆಲದಲ್ಲಿ ಇನ್ನೂ ಸ್ಫೋಟಗೊಳ್ಳದಿರುವ 150,000 ಟನ್ನಿನಷ್ಟು ಮದ್ದುಗುಂಡುಗಳು ಹುದುಗಿವೆ.

ವಿಯೆಟ್ನಾಂ ಜನತೆಯ ಧೀಮಂತ ಹೋರಾಟದ ಕಾಲಾವಧಿಯಲ್ಲಿ ಸೋವಿಯತ್ ಯೂನಿಯನ್ನಿನ ಕಮ್ಯೂನಿಸ್ಟ್ ಪಕ್ಷ, ಅಲ್ಲಿನ ಜನತೆ ನೀಡಿದ ಸೌಹಾರ್ದ ಬೆಂಬಲವನ್ನು ವಿಯೆಟ್ನಾಂ ಜನ ಎಂದೂ ಮರೆಯಲಾರರು. ಸೋವಿಯತ್ ದೇಶ ಮತ್ತು ಜಗತ್ತಿನ ಸಾಮ್ರಾಜ್ಯಶಾಹಿ ವಿರೋಧಿ ಶಕ್ತಿಗಳು ವಿಯೆಟ್ನಾಂಗೆ ನೀಡಿದ ದೃಢ ಬೆಂಬಲವು ಪ್ಯಾರಿಸ್ ಒಪ್ಪಂದಕ್ಕೆ ಅಮೇರಿಕವು ಬಲವಂತವಾಗಿ ಅಂಗೀಕಾರ ನೀಡುವ ಪರಿಸ್ಥಿತಿಯನ್ನು ನಿರ್ಮಿಸಿತು.

ಕಳೆದ 10 ವರ್ಷಗಳು ವಿಯೆಟ್ನಾಂನ ಬೆಳವಣಿಗೆಯಲ್ಲಿ ಮಹತ್ವದ ಕಾಲಾವಧಿ. ಯುದ್ಧದ ಗಾಯಗಳೊಂದಿಗೆ ಮುನ್ನಡೆದ ವೀರ ಜನತೆ ಸ್ಥೈರ್ಯದಿಂದ, ದೃಢಚಿತ್ತದಿಂದ ನವಸಮಾಜವನ್ನು ರಚಿಸುವ ಕೆಲಸದಲ್ಲಿ ತೊಡಗಿದ್ದಾರೆ. 1975 ರಲ್ಲಿ ದಕ್ಷಿಣ ವಿಯೆಟ್ನಾಂನ ದೇಶಾಭಿಮಾನಿ ಜನತೆ ಸೈಗಾನ್‌ನಲ್ಲಿದ್ದ ಪ್ರತಿಗಾಮಿ ಆಡಳಿತ ವ್ಯವಸ್ಥೆಯನ್ನು ಕಿತ್ತೊಗೆಯಿತು. ಇದರಿಂದ ವಿಯೆಟ್ನಾಂ ಜನತೆಗೆ ಒಂದೇ ಸೂರಿನಡಿಯಲ್ಲಿ ಸಮಾಜವಾದಿ ವ್ಯವಸ್ಥೆಯನ್ನು ಕಟ್ಟಿ ಬೆಳೆಸಲು ನೆರವಾಯಿತು.

1982 ರಲ್ಲಿ ಹಾನೊಯಲ್ಲಿ ಸಮಾವೇಶಗೊಂಡ ವಿಯೆಟ್ನಾಂ ಕಮ್ಯೂನಿಸ್ಟ್ ಪಕ್ಷದ 5ನೇ ಮಹಾಸಭೆಯಲ್ಲಿ ರಾಷ್ಟ್ರ ಸಾಧಿಸಿದ ಪ್ರಗತಿಯ ವಿಮರ್ಶೆ ಮಾಡಲಾಯಿತು. "...ಕಳೆದವುಗಳು ವಿಯೆಟ್ನಾಂ ಕ್ರಾಂತಿಯ ನಂತರದ ನಿಯಮಬದ್ಧ ಪ್ರಗತಿಯ ಅತ್ಯಂತ ಕಷ್ಟಕರವಾದ ಮತ್ತು ಸಮಸ್ಯಾತ್ಮಕ ವರ್ಷಗಳು ಅಂತೆಯೇ ವಿಯೆಟ್ನಾಂ ಜನತೆ ಸಾಧಿಸಿದ ಅದ್ಭುತ ವಿಜಯಗಳ ಕಾಲವೂ ಹೌದು...." ಎಂದು ಮಹಾಸಭೆಯು ದಾಖಲಿಸಿತು. ಯುದ್ಧವು ರಾಷ್ಟ್ರದ ಆರ್ಥಿಕತೆಯನ್ನು ಕನಿಷ್ಟ 10 ವರ್ಷಗಳಷ್ಟು ಹಿಂದೆ ಸರಿಸಿತ್ತು. ಈ ಎಲ್ಲಾ ತೊಡರುಗಳನ್ನು ಎದುರಿಸಿಯೂ ಉತ್ತರ ವಿಯೆಟ್ನಾಂನ ಕಾರ್ಮಿಕ ವರ್ಗ ಉತ್ಪಾದನೆಯನ್ನು ಯುದ್ಧದ ಹಿಂದಿನ ಮಟ್ಟಕ್ಕೆ 1975 ರ ಕೊನೆಯ ಭಾಗದಲ್ಲಿ ಮುನ್ನಡೆಸಿತು.

ಕಳೆದ ಕೆಲವು ವರ್ಷಗಳಲ್ಲಿ ಇವರು ಹೊಸದಾಗಿ ಕೆಲವು ಸಾಧನೆಗಳನ್ನು ಮಾಡಿರುವರು. 1975–78ರ ನಡುವೆ ವಿದ್ಯುಚ್ಛಕ್ತಿ ಉತ್ಪಾದನೆ 1.6 ರಷ್ಟು ಹೆಚ್ಚಾಯಿತು. ಉಕ್ಕಿನ ಉತ್ಪಾದನೆ 2.7 ರಷ್ಟು ಮತ್ತು ಯಂತ್ರ ತಯಾರಿಕೆಗಳು 60 ಶೇಕಡದಷ್ಟು ಅಧಿಕಗೊಂಡವು. ದಕ್ಷಿಣ ಪೂರ್ವ ಏಷ್ಯದ ಅತ್ಯಂತ ದೊಡ್ಡದಾದ ವಿದ್ಯುತ್‌ಸ್ಥಾವರ ಘಟಕವು ಕಪ್ಪು ನದಿಯ ದಡದಲ್ಲಿ ತಲೆ ಎತ್ತುತ್ತಿದೆ. ವಾಂಗ್‌ಟಾವೊದಲ್ಲಿ ಅನಿಲ ಮತ್ತು ಎಣ್ಣೆ ಸ್ಥಾವರ, ದ್ಯಾಗೂನ್‌ನಲ್ಲಿ ಉಕ್ಕಿನ ಘಟಕ ಮತ್ತು ಬಿಮ್ ಸೋನ್‌ನಲ್ಲಿ ಸಿಮೆಂಟ್ ಕಾರ್ಖಾನೆಯ ಕೆಲಸಗಳು ಬಿರುಸಿನಿಂದ ಸಾಗಿದೆ.

1981 ರಲ್ಲಿ ವಿಯೆಟ್ನಾಂನಲ್ಲಿ ಕೃಷಿ ಕಾರ್ಮಿಕರು ಭತ್ತ ಮತ್ತು ಇತರ ವ್ಯವಸಾಯ ಬೆಳೆಗಳ ದಂಡಿ ಬೆಳೆಯನ್ನು ಬೆಳಸಿ ಹೊಸ ದಾಖಲೆಯನ್ನೇ ನಿರ್ಮಿಸಿದರು.

ಪ್ರಗತಿಯತ್ತ ದಾಪುಗಾಲು ಹಾಕಿ ಮುನ್ನಡೆಯುತ್ತಿರುವ ಸಮಾಜವಾದಿ ವಿಯೆಟ್ನಾಂ ಗಣರಾಜ್ಯವು ಸಾಮ್ರಾಜ್ಯಶಾಹಿಗಳನ್ನು ದಿಕ್ಕೆಡಿಸಿದೆ. ಈ ಕಾರಣಕ್ಕಾಗಿಯೇ ಅಮೇರಿಕ ಇಂದಿಗೂ ತನ್ನ ಕುಕೃತ್ಯವನ್ನು ವಿಭಿನ್ನ ರೀತಿಗಳಲ್ಲಿ ವಿಯೆಟ್ನಾಂ ಮೇಲೆ ನಡೆಸುತ್ತಿದೆ. ವಿಯೆಟ್ನಾಂ ಮೇಲೆ ಆರ್ಥಿಕ ದಿಗ್ಬಂಧವನ್ನು ಹೇರಿರುವ ಅಮೇರಿಕ ಸಂಯುಕ್ತ ಸಂಸ್ಥಾನವು ತನ್ನ ಏಷ್ಯದ ಬಾಲಬಡುಕ ದೇಶಗಳನ್ನು ಎತ್ತಿಕಟ್ಟುವ ಮತ್ತು ಅಶಾಂತಿ ವಾತಾವರಣ ಸೃಷ್ಟಿಸುವ ಪ್ರಯತ್ನವನ್ನು ಮುಂದುವರಿಸಿದೆ.

ಸಾಮ್ರಾಜ್ಯಶಾಹಿ ದೊರೆ ಅಮೇರಿಕ ಯಾವತ್ತೂ ಮರೆಯಬಾರದ ಪಾಠವನ್ನು ವಿಯೆಟ್ನಾಂನ ಧೀರ ಜನತೆ ಕಲಿಸಿದೆ. ಇದನ್ನು ಮರೆತು ಅಮೇರಿಕ ಮತ್ತೆ ಯುದ್ಧಕ್ಕೆ ಕಾಲ್ಕೆರೆದರೆ ಮತ್ತೊಮ್ಮೆ ಒದೆಸಿಕೊಳ್ಳಬೇಕಾಗುತ್ತದೆ. ಚರಿತ್ರೆಯಿಂದ ಪಾಠ ಕಲಿಯದ ಜನ ಚರಿತ್ರೆ ಮರುಕಳಿಸಿದಾಗ ಪಾಠ ಕಲಿಯಲೇ ಬೇಕಾಗುತ್ತದೆ.

— ಕುಮಾರ್ ಕುಂದಾಪುರ

ಬೆಂಗಳೂರು :

ನಿರುದ್ಯೋಗ ವಿರೋಧಿ ದಿನಾಚರಣೆ

ಭಾರತ ಪ್ರಜಾಸತ್ತಾತ್ಮಕ ಯುವಜನ ಫೆಡರೇಶನ್ (DYFI)ನ ಬೆಂಗಳೂರು ಜಿಲ್ಲಾ ಸಮಿತಿಯು ಮಾರ್ಚ್ 28ರಂದು ನಿರುದ್ಯೋಗ ವಿರೋಧಿ ದಿನವನ್ನು ಆಚರಿಸಿತು.

ಮಾರ್ಚ್ 28ರ ಸೋಮವಾರ ಮಧ್ಯಾನ್ಹ 2ಕ್ಕೆ ಸಿಲ್ವರ್‌ಜ್ಯೂಬಿಲಿ ಪಾರ್ಕ್‌ನಿಂದ ಮೆರವಣಿಗೆಯು ಹೊರಟು ಕೆ. ಆರ್. ಸರ್ಕಲ್ ತಲುಪಿದಾಗ ನಿಷೇಧಾಜ್ಞೆಯ ನೆಪವೊಡ್ಡಿ ಪೋಲೀಸರು ಅಡ್ಡಿಪಡಿಸಿದ್ದರಿಂದ 15 ನಿಮಿಷ ಸರ್ಕಲ್ ಮಧ್ಯೆ ಧರಣಿ ಕೂರಬೇಕಾಯಿತು.

ಕಬ್ಬನ್ ಪಾರ್ಕಿನಲ್ಲಿ ಸತ್ಯಾಗ್ರಹ ಕುಳಿತಿದ್ದ ಹರಿಹರ ಪಾಲಿಫೈಬರ್ಸ್ ಕಾರ್ಮಿಕರಿಗೂ ಮತ್ತು ವೃತ್ತಿ ಶಿಕ್ಷಣ ವಿದ್ಯಾರ್ಥಿಗಳಿಗೂ ಬೆಂಬಲ ಸೂಚಿಸಿ, ಮುಖ್ಯಮಂತ್ರಿಗಳನ್ನು ಕಂಡು, ವಿಜಯನಗರ ಉಕ್ಕಿನ ಕಾರ್ಖಾನೆ, ಸ್ಟೈಪೆಂಡರಿ ಸಮಸ್ಯೆ, ಎಸ್. ಎಸ್. ಎಲ್. ಸಿ.ವರೆವಿಗೆ ಉಚಿತ ಶಿಕ್ಷಣ, ವೃತ್ತಿ ತರಬೇತಿದಾರರಿಗೆ ಸರಿಯಾದ ಸೌಲಭ್ಯ ಮತ್ತು ಸ್ಟೈಪೆಂಡರಿ ಹೆಚ್ಚು ಮಾಡುವುದರ ಬಗ್ಗೆ, ಎಲ್ಲಾ ಜಿಲ್ಲಾ ಕೇಂದ್ರಗಳಲ್ಲೂ ಕೈಗಾರಿಕೆ, ಕಾರ್ಖಾನೆಗಳನ್ನು ಸ್ಥಾಪಿಸಬೇಕು. ಸ್ಥಳೀಯರಿಗೆ ಆದ್ಯತೆ ನೀಡಬೇಕು. ಕೃಷಿ–ಕಾರ್ಮಿಕರ ವೇತನ ಹೆಚ್ಚು ಮಾಡಬೇಕು. ವೃತ್ತಿಪರ ಶಿಕ್ಷಣವನ್ನು ಜಾರಿಗೆ ತರಬೇಕು. ಉದ್ಯೋಗ ಇಲ್ಲವೇ ನಿರುದ್ಯೋಗ ಭತ್ಯೆ, ಉದ್ಯೋಗ ವಿನಿಮಯ ಕೇಂದ್ರಗಳಲ್ಲಿನ ಭ್ರಷ್ಟಾಚಾರ ಮುಂತಾಗಿ 9 ಬೇಡಿಕೆಗಳ ಮನವಿಯನ್ನು ನೀಡಲಾಯಿತು.

ನಂತರ ಮೆರವಣಿಗೆಯು ಮುಖ್ಯ ರಸ್ತೆಗಳನ್ನು ದಾಟಿ ಚಿಕ್ಕ ಲಾಲ್‌ಬಾಗ್ ತಲುಪಿ ಬಹಿರಂಗ ಸಭೆ ನಡೆಸಿತು. ಬೆಂಗಳೂರು ಜಿಲ್ಲಾ DYFIನ ಮಹಿಳಾ ಶಾಖೆಯ ಸಂಚಾಲಕಿ ಕಾ. ಸ್ವರ್ಣಾಂಬ ಸ್ವಾಗತಿಸಿದರು. ಬೆಂಗಳೂರು ಜಿಲ್ಲಾ DYFIನ ಕಾರ್ಯದರ್ಶಿ ಕಾ. ಎಸ್. ಶಿವರಾಂ ಅಧ್ಯಕ್ಷತೆ ವಹಿಸಿದ್ದರು. ಕಾ। ಎನ್.ಕೆ. ಉಪಾಧ್ಯಾಯ, ಕಾ. ಟಿ. ಎಸ್. ಅನಂತರಾವ್, ಕಾ. ಆರ್. ಶ್ರೀನಿವಾಸ್. ಮುರಳೀಧರ ನಾಯ್ಡು, ಪಿ. ರಾಜು, ಮತ್ತು ಕಾ। ಜಯಶೇಖರ್ ಹಾಗೂ ಇತರ ಬೆಂಗಳೂರು ಜಿಲ್ಲಾ D. Y. F. I. ಮುಖಂಡರುಗಳು ಯುವಜನರು ಎದುರಿಸುತ್ತಿರುವ ವಿವಿಧ ಸಮಸ್ಯೆಗಳ ಬಗ್ಗೆ ಮಾತನಾಡಿದರು.

ಧಾರವಾಡ

ನಿರುದ್ಯೋಗ ವಿರೋಧಿ ದಿನಾಚರಣೆ

ದಿನಾಂಕ 28–3–83ರಂದು ನಿರುದ್ಯೋಗ ವಿರೋಧಿ ದಿನಾಚರಣೆಯ ಅಂಗವಾಗಿ ಭಾರತ ಪ್ರಜಾಸತ್ತಾತ್ಮಕ ಯುವಜನ ಫೆಡರೇಶನ್ (DYFI)ನ ಧಾರವಾಡ ಜಿಲ್ಲಾ ಘಟಕವು ಧಾರವಾಡ ಜಿಲ್ಲಾಧಿಕಾರಿಗಳಿಗೆ ಯುವಜನರ ಸಮಸ್ಯೆಗಳ ಕುರಿತು ಮನವಿ ಪತ್ರ ಅರ್ಪಿಸಿತು.

ಬೇಡಿಕೆಗಳನ್ನು ಸರಕಾರದ ಗಮನಕ್ಕೆ ತರುವುದಾಗಿ ಜಿಲ್ಲಾಧಿಕಾರಿಗಳು ಭರವಸೆ ನೀಡಿದರೆಂದು ಜಿಲ್ಲಾ ಅಧ್ಯಕ್ಷರಾದ ಜಿ. ಸಿ. ಧ್ವೈ. ಮಠ ತಿಳಿಸಿದ್ದಾರೆ

ವಿಧಾನಸಭೆಯಲ್ಲಿ ಸೂರಿ ಅವರ ಭಾಷಣ

[1ನೇ ಪುಟದಿಂದ]

ಆಸ್ಸಾಂನಲ್ಲಿದ್ದಂತೆಯೇ ಬೆಂಗಳೂರಿನಲ್ಲಿ ಕೂಡ ಸಿ.ಐ.ಎ. ಏಜಂಟರಿದ್ದಾರೆಂದು ಎಚ್ಚರಿಸಿದರು.

ಲೋಕೋಪಯೋಗಿ ಇಲಾಖೆಯ ಕೆಲಸಗಳನ್ನು ಕಂಟ್ರಾಕ್ಟರರಿಗೆ ಒಪ್ಪಿಸದೆ ಸರ್ಕಾರವೇ ಕಾರ್ಯಕ್ಕೆಗೊಂಡರೆ ನಿರುದ್ಯೋಗ ಸಮಸ್ಯೆ ಬಗೆಹರಿಸಲು ಸಹಾಯವಾಗುವುದೆಂದು ಹೇಳಿದರು. ನೌಕರದಾರ ವರ್ಗದಲ್ಲಿಯ ಸ್ವಹಿತ ಸಾಧಕರು ಈ ಸೂಚನೆಯನ್ನು ಬಲವಾಗಿ ವಿರೋಧಿಸುವುದರಲ್ಲಿ ಸಂಶಯವಿಲ್ಲೆಂದು, ಆದರೆ ಆ ರೀತಿ ಕೆಲಸಗಳನ್ನು ಮಾಡಿದ್ದಾದರೆ ಕೃಷಿ ಕೂಲಿಗಾರರ ಮತ್ತು ಗ್ರಾಮಾಂತರ ಪ್ರದೇಶದ ಬಡವರಿಗೆ ಲಾಭದಾಯಕವಾಗುವುದೆಂದು ಹೇಳಿದರು. ಸಾಧಾರಣ 40 ಲಕ್ಷವಿದ್ದಿರುವ ಕೃಷಿ ಕೂಲಿಗಾರರಿಗೆ ನೌಕರಿ ಸಿಗುವಂತೆ ಭೂ ಸೇನೆಯನ್ನು ಪುನರ್ ಘಟಿಸಬೇಕೆಂದು ಸೂಚಿಸಿದರು.

ಲಂಚಗುಳಿತನಕ್ಕೆ ಬಲಿಯಾಗುವುದನ್ನು ತಪ್ಪಿಸಲು ಸ್ಟೈಫೆಂಡರಿಗಳ ಸಂಬಳ ಹೆಚ್ಚಿಸಬೇಕೆಂದೂ, ಸಾಮಾಜಿಕ ಆರ್ಥಿಕ ಪ್ರಶ್ನೆಗಳಿಗೆ ಸಂಬಂಧಪಟ್ಟ ಖಟ್ಲೆಗಳನ್ನು ಆದಷ್ಟು ಶೀಘ್ರ ನಿರ್ಧರಿಸುವಂತೆ ಹೈಕೋರ್ಟನ್ನು ಸರ್ಕಾರ ಕೇಳಿಕೊಳ್ಳಬೇಕೆಂದೂ ವಿನಂತಿಸಿದರು.

ಸರಕಾರದ ನಾನಾ ಖಾತೆಗಳಲ್ಲಿ ಖಾಲಿಯಾಗಿರುವ 50,000 ಸ್ಥಾನಗಳನ್ನು ತುಂಬುವ ಕುರಿತು ಅಂದಾಜು ಪತ್ರಿಕೆ ಮೌನವಾಗಿದೆ ಎಂದು ರಾಜ್ಯದ ಸಂಪನ್ಮೂಲಗಳನ್ನು ಕ್ರೋಢೀಕರಿಸುವ ದಿಸೆಯಲ್ಲಿ ಸರಕಾರ ತೀವ್ರ ಕ್ರಮ ಕೈಗೊಂಡಿಲ್ಲವೆಂದೂ, ಹಾಗೆ ಮಾಡಿದ್ದೇ ಆದರೆ ಖಾಸಗೀ ಕಾಲೇಜುಗಳಲ್ಲಿಯ ಕ್ಯಾಪಿಟೇಶನ್ ಶುಲ್ಕ ರದ್ದುಪಡಿಸಬಹುದಿತ್ತೆಂದೂ, ಕಾಲಾಂತರದಲ್ಲಿ ಕ್ಯಾಪಿಟೇಶನ್ ಫೀ ರದ್ದು ಮಾಡುತ್ತೆವೆಂಬ ಸರಕಾರದ ಹೇಳಿಕೆ ಜನರನ್ನು ಸಮಾಧಾನಗೊಳಿಸದೆಂದೂ, ಅದಕಾರಣ ಶುಲ್ಕವನ್ನು ಕಡಿಮೆ ಮಾಡುವ ಪ್ರಯತ್ನ ಮಾಡಬೇಕೆಂದು ಹೇಳಿದರು.

ವಿಜಯನಗರ ಉಕ್ಕಿನ ಕಾರ್ಖಾನೆಯ ಕುರಿತು ಎಲ್ಲ ಪಕ್ಷಗಳ ಚಳುವಳಿ ಅಗತ್ಯವೆಂಬ ಅಭಿಪ್ರಾಯ ವ್ಯಕ್ತ ಮಾಡಿದರು.

ಮಾರ್ಕ್ಸವಾದಿ ಕಮ್ಯೂನಿಸ್ಟ ಪಾರ್ಟಿ "ಕತ್ತಿ–ಚಾಕು"ವಿನ ಸಂಸ್ಕೃತಿಯನ್ನು ಅನುಸರಿಸುತ್ತಿದೆ ಎಂಬ ಕೆಲವರ ಆಪಾದನೆಯನ್ನು ಬಲವಾಗಿ ಖಂಡಿಸಿ, ನಕ್ಸಲೈಟ್ ಮತ್ತು ಗೂಂಡಾಗಿರಿಯನ್ನು ಸಿ.ಪಿ.ಐ. (ಎಂ.) ನಂಬುವುದಿಲ್ಲವೆಂದು ಹೇಳಿದರು.

ಕಾರ್ಮಿಕ ಸಂಘಟನೆಯ ಕುರಿತು ಏನೂ ಅನುಭವವಿಲ್ಲದವರು ಅಂಥ ವಿಚಾರಹೀನ ಮಾತುಗಳನ್ನಾಡುತ್ತಾರೆಂದೂ ಹೇಳಿ, ಮಾರ್ಕ್ಸವಾದಿ ಕಮ್ಯೂನಿಸ್ಟ ಪಾರ್ಟಿಯು ಯಾರ ಮೆಹರಬಾನಿಯಿಂದಾಗಿ ಅಥವಾ ಆಶ್ರಯದಿಂದ ಬೆಳೆಯುತ್ತಿಲ್ಲವೆಂದೂ, ಅದು ಜನತೆಯ ಬೆಂಬಲ; ಆಶ್ರಯದಿಂದ ಮಾತ್ರ ಬೆಳೆಯುತ್ತದೆಂದು ಸ್ಪಷ್ಟೀಕರಿಸಿದರು.

ತಮ್ಮ ಪಾರ್ಟಿ ಸರಕಾರಕ್ಕೆ ಮೋಸ ಮಾಡುತ್ತದೆ ಎಂಬ ಆರೋಪವನ್ನು ಅಲ್ಲಗಳೆದು, ಜನರ ಹಿತಕ್ಕಾಗಿ ಉಪಯೋಗವಾಗುವಂಥ ಕಾರ್ಯಗಳನ್ನು ಕೈಗೊಳ್ಳಬೇಕೆಂದು ಸರಕಾರದ ಮೇಲೆ ನಮ್ಮ ಪಾರ್ಟಿ ಒತ್ತಾಯ ತರುತ್ತದೆಯಷ್ಟೇ ಎಂದು ಹೇಳಿದರು.

ಮತ್ತೆ ಹೋರಾಟದ ಕಣದಲ್ಲಿ

(ಒಂದನೇ ಪುಟದಿಂದ)

52 ಮಂದಿ ಕಾರ್ಮಿಕರನ್ನು ಬಲವಂತವಾಗಿ ಹೊರಕ್ಕೆ ಕರೆದೊಯ್ಯಲಾಗಿತ್ತು.

ಆಡಳಿತ ವರ್ಗದವರು ನೀಡಿದ ದೂರಿನ ಅನ್ವಯ ನಾವು ವರ್ತಿಸಿರುವುದಾಗಿ ಪೋಲೀಸ್ ಅಧಿಕಾರಿಗಳು ತಿಳಿಸಿದರು. ಆದರೆ 400 ಮಂದಿ ಪೋಲೀಸರು, 20 ಮಂದಿ ಅಧಿಕಾರಿಗಳು ಸುತ್ತಮುತ್ತಲ ಮೂರು ತಾಲ್ಲೂಕುಗಳಿಂದ ತಯಾರಾಗಿ ಬಂದದ್ದು ಆಶ್ಚರ್ಯಕರ. ಕಾರ್ಮಿಕರು ಯಾವುದೇ ಕಾನೂನನ್ನು ಉಲ್ಲಂಘಿಸಿಲ್ಲ. ಆದರೆ ಆಡಳಿತ ವರ್ಗವು ಸರ್ಕಾರದ ಅನುಮತಿ ಪಡೆಯದೆ ಅಥವಾ ಕಾರ್ಖಾನೆಯನ್ನು ಮುಚ್ಚಲು ಬೇಕಾದಂತಹ ಯಾವುದೇ ನ್ಯಾಯಸಮ್ಮತ ಕಾರಣವಿಲ್ಲದೆ ಬೀಗಮುದ್ರೆ ಘೋಷಿಸಿದ್ದು ಕಾನೂನಿನ ಉಲ್ಲಂಘನೆಯಾಗಿದೆ. ಡೆಪ್ಯುಟಿ ಲೇಬರ್ ಕಮೀಷನರ್ ಅವರನ್ನು ಭೇಟಿ ಮಾಡಲು ಪ್ರಯತ್ನಿಸಿದಾಗ ಅವರು ಕುಮಾರಪಟ್ಟಣದಲ್ಲಿರುವ ಆಡಳಿತ ವರ್ಗದ ಅತಿಥಿ ಗೃಹದಲ್ಲಿ ಆರಾಮವಾಗಿದ್ದುದು ತಿಳಿದು ಬಂತು.

ಸುಳ್ಳು ದೂರನ್ನು ನೀಡಿ ಕಾರ್ಮಿಕರನ್ನು ಅಕ್ರಮವಾಗಿ ಶಿಕ್ಷೆಗೊಳಪಡಿಸಿದಕ್ಕಾಗಿ ಗ್ವಾಲಿಯರ್ ರೇಯಾನ್ಸ್‌ನ ಎಸ್. ಕೆ. ಜೈನ್ ಅವರು ಬಹಿರಂಗವಾಗಿ ಕಾರ್ಮಿಕರಲ್ಲಿ ಕ್ಷಮಾಪಣೆ ಕೇಳಿಕೊಳ್ಳಬೇಕೆಂದೂ ಇಲ್ಲದಿದ್ದಲ್ಲಿ ಅವರ ಮೇಲೆ ಮೊಕದ್ದಮೆ ಹೂಡಲಾಗುವುದೆಂದೂ ಕಾರ್ಮಿಕ ಸಂಘವು ಅವರಿಗೆ ಪತ್ರ ಬರೆದಿದೆ.

21ರಂದು ಬೆಳಿಗ್ಗೆ 6 ಗಂಟೆಗೆ ರಾಣೀಬೆನ್ನೂರಿನ ತಹಶೀಲ್ದಾರರು ಮತ್ತು ಪೋಲೀಸರು ಯಾವುದೇ ಹಿಂಸಾಚಾರವಾಗಲೀ, ಅಹಿತಕರ ಘಟನೆಗಳಾಗಲೀ ನಡೆಯದೇ ಇದ್ದಾಗ್ಯೂ ಕೂಡ ನಿಷೇಧಾಜ್ಞೆಯನ್ನು ಜಾರಿಮಾಡಿ ಕಾರ್ಮಿಕ ಸಂಘದ ಅಧ್ಯಕ್ಷರಾದ ಕಾ। ವಿ. ಜಿ. ಕೆ. ನಾಯರ್ ಅವರನ್ನು ಒಳಗೊಂಡಂತೆ 110 ಮಂದಿ ಕಾರ್ಮಿಕರನ್ನು ಅಕ್ರಮವಾಗಿ ಬಂಧಿಸಿದರು. ಇದು ಆಡಳಿತ ವರ್ಗಕ್ಕೆ ನೀಡಿರುವ ನೇರ ಸಹಾಯವಾಗಿದೆ.

ಕಾರ್ಮಿಕ ವಿವಾದದಲ್ಲಿ ಪೋಲೀಸರು ಮತ್ತು ಆಡಳಿತ ಯಂತ್ರ ನೇರವಾಗಿ ಮಧ್ಯಪ್ರವೇಶ ಮಾಡಿರುವುದು ತೀರಾ ಖಂಡನೀಯ ಸಂಗತಿಯಾಗಿದೆ. ಅದರಲ್ಲೂ ಮುಖ್ಯವಾಗಿ ಡೆಪ್ಯುಟಿ ಲೇಬರ್ ಕಮಿಷನರ್‌ರವರು ಪೂರ್ಣವಾಗಿ ಆಡಳಿತ ವರ್ಗದವರೊಂದಿಗೆ ಶಾಮಿಲಾಗಿರುವುದು ಖಂಡನಾರ್ಹ. ತಪ್ಪಿತಸ್ಥ ಅಧಿಕಾರಿಗಳನ್ನು ಶಿಕ್ಷಿಸಬೇಕೆಂದೂ ಕಾರ್ಮಿಕ ಕಾನೂನುಗಳನ್ನು ಜಾರಿಮಾಡದೆ ಕಾರ್ಮಿಕರ ಮೇಲೆ ಧಾಳಿ ನಡೆಸುತ್ತಿರುವ ಆಡಳಿತ ವರ್ಗದ ಮೇರೆ ಸರ್ಕಾರ ಕ್ರಮಕೈಗೊಳ್ಳಬೇಕೆಂದೂ ಕಾರ್ಮಿಕ ಸಂಘವು ಒತ್ತಾಯಿಸಿದೆ.

ಹರಿಹರ ಪಾಲಿಫೈಬರ್ಸ್ ಕನ್‌ಸ್ಟ್ರಕ್ಷನ್ ವರ್ಕರ್ಸ್ ಯೂನಿಯನ್ನಿನ 53 ಮಂದಿ ಕಾರ್ಮಿಕರು ತಮ್ಮ ನ್ಯಾಯಯುತ ಬೇಡಿಕೆಗಳನ್ನು ಈಡೇರಿಸಬೇಕೆಂದು ಒತ್ತಾಯಿಸಿ 26–3–83 ರಿಂದ ವಿಧಾನಸೌಧದೆದುರು ಧರಣಿ ಸತ್ಯಾಗ್ರಹ ನಡೆಸುತ್ತಿದ್ದಾರೆ. ಲೇಬರ್ ಕಮೀಷನರ್ ಅವರೊಂದಿಗೆ ಸಂಘವು ನಡೆಸುತ್ತಿರುವ ಮಾತುಕತೆಗಳು ಫಲಕಾರಿಯಾಗುತ್ತಿಲ್ಲವೆಂದು ತಿಳಿದು ಬಂದಿದೆ, ಸರ್ಕಾರೀ ಅಧಿಕಾರಿಗಳೊಂದಿಗೂ, ಕಾರ್ಮಿಕ ಸಚಿವರೊಂದಿಗೂ ಮಾತುಕತೆ ಮುಂದುವರೆದಿದೆ.

ದಕ್ಷಿಣ ಕನ್ನಡ
ಲೇಬರ್ ಕಮೀಷನರರಿಗೆ ಕಾರ್ಮಿಕರ ಮನವಿ

ಬಂಟ್ವಾಳ ಮತ್ತು ಮಂಗಳೂರು ತಾಲ್ಲೂಕುಗಳ ಕೆಂಪುಕಲ್ಲು ಕಡಿಯುವ ಕಾರ್ಮಿಕರು ಮೆರವಣಿಗೆಯಲ್ಲಿ ತೆರಳಿ ತಾ॥ 14–3–1983ರಂದು ಲೇಬರ್ ಕಮಿಶನರವರಿಗೆ ಬೇಡಿಕೆಗಳ ಮನವಿಯೊಂದನ್ನು ಅರ್ಪಿಸಿದರು. ಸಿ.ಐ.ಟಿ.ಯು. ಜಿಲ್ಲಾ ಕಾರ್ಯದರ್ಶಿ ಶ್ರೀ ಕೆ. ಮೂಸಬ್ಬ ಮತ್ತು ಯೂನಿಯನ್ನಿನ ಕಾರ್ಯದರ್ಶಿ ಶ್ರೀ ಯು. ಬಿ. ಲೋಕಯ್ಯನವರು ಮನವಿಯೊಂದನ್ನು ಅರ್ಪಿಸಿ ಬೇಡಿಕೆಗಳ ಬಗ್ಗೆ ವಿವರಿಸಿದರು. ಮನವಿಯನ್ನು ಸ್ವೀಕರಿಸಿದ ಲೇಬರ್ ಕಮಿಶನರವರು ಕೂಡಲೆ ಮಾಲೀಕರನ್ನು ಕರೆದು ಇತ್ಯರ್ಥ ಮಾಡುವ ಭರವಸೆಯನ್ನಿತ್ತರು. ಆನಂತರ ಸೇರಿದ ಸಭೆಯಲ್ಲಿ ಶ್ರೀ ಯು. ಬಿ. ಲೋಕಯ್ಯನವರು ಲೇಬರ್ ಕಮಿಶನರವರಿತ್ತ ಭರವಸೆಯನ್ನು ವಿವರಿಸಿದರು. ಕೂಡಲೆ ಇತ್ಯರ್ಥವಾಗದಿದ್ದರೆ ಮುಂದಿನ ಹೋರಾಟಕ್ಕೆ ಸಿದ್ಧರಾಗಬೇಕೆಂದು ಕರೆಯಿತ್ತರು.

ಸಂತಾಪ

ಮಾರ್ಕ್ಸವಾದಿ ಕಮ್ಯೂನಿಸ್ಟ ಪಕ್ಷದ ಸದಸ್ಯರೂ ಹಾಗೂ ಜಿಲ್ಲಾ ರೈತ ಸಂಘದ ಕಮಿಟಿ ಸದಸ್ಯರೂ ಆದ ಕೊಂಚಾಡಿ ಹೊನ್ನಯ್ಯ ದೇವಾಡಿಗರ ಚಿಕ್ಕತಾಯಿಯವರು ಶ್ರೀಮತಿ ವೆಂಕಮ್ಮ ತಾ॥ 6–3–83ರಂದು ತನ್ನ 95 ವರ್ಷ ಪ್ರಾಯದಲ್ಲಿ ನಿಧನರಾದರು. ಅವರ ನಿಧನದ ಬಗ್ಗೆ ಪದವು ಪ್ರದೇಶ ಬೀಡಿ ಕೆಲಸಗಾರರ ಸಂಘವು ಸಂತಾಪ ಸೂಚಿಸಿದೆ.

ಸಿ.ಐ.ಟಿ.ಯು. ಅಖಿಲ ಭಾರತ ಸಮ್ಮೇಳನಕ್ಕೆ ಎರಡೂವರೆ ಸಾವಿರ ಪ್ರತಿನಿಧಿಗಳು

ಸಿ.ಐ.ಟಿ.ಯು. ಕಾರ್ಯದರ್ಶಿಯವರ ಸುತ್ತೋಲೆಯ ಪ್ರಕಾರ ಏಪ್ರಿಲ್ 13 ರಿಂದ 17ರವರೆಗೆ ಕಾನ್ಪುರದಲ್ಲಿ ಜರುಗಲಿರುವ ಸಿ.ಐ.ಟಿ.ಯು.ನ 5ನೆಯ ಅಖಿಲಭಾರತ ಸಮ್ಮೇಳನದಲ್ಲಿ ದೇಶದ ವಿವಿಧ ಭಾಗಗಳಿಂದ 600 ಸದಸ್ಯರಿಗೆ ಒಬ್ಬ ಪ್ರತಿನಿಧಿಯಂತೆ 2481 ಮಂದಿ ಭಾಗವಹಿಸಲಿದ್ದಾರೆಂದು ತಿಳಿದು ಬಂದಿದೆ. ಸಮ್ಮೇಳನದಲ್ಲಿ ಭಾಗವಹಿಸಲಿರುವ ಪ್ರತಿನಿಧಿಗಳ ರಾಜ್ಯವಾರು ವಿವರವನ್ನು ಕೆಳಗಿನ ಪಟ್ಟಿಯಲ್ಲಿ ಕೊಡಲಾಗಿದೆ,

ರಾಜ್ಯ	ಸದಸ್ಯತ್ವ	ಪ್ರತಿನಿಧಿಗಳ ಸಂಖ್ಯೆ
ಅಂಡಮಾನ್ ಮತ್ತು ನಿಕೋಬಾರ್ ದ್ವೀಪಗಳು	300	1
ಆಂಧ್ರಪ್ರದೇಶ	55,000	93
ಅಸ್ಸಾಂ	30,000	50
ಬಿಹಾರ್	55,000	93
ದೆಹಲಿ	30,206	50
ಗೋವಾ	4,819	8
ಗುಜರಾತ್	15,251	25
ಹರ್ಯಾಣ	11,145	19
ಹಿಮಾಚಲ ಪ್ರದೇಶ	1,500	3
ಕರ್ನಾಟಕ	34,000	57
ಕೇರಳ	3,00,000	500
ಮಧ್ಯಪ್ರದೇಶ	18,568	31
ಮಹಾರಾಷ್ಟ್ರ	72,000	120
ಒರಿಸ್ಸಾ	18,742	31
ಪಾಂಡಿಚೇರಿ	1,372	2
ಪಂಜಾಬ್	44,229	74
ರಾಜಾಸ್ಥಾನ್	23,565	39
ತಮಿಳುನಾಡು	1,30,000	217
ತ್ರಿಪುರ	15,000	25
ಉತ್ತರ ಪ್ರದೇಶ	25,278	43
ಪಶ್ಚಿಮ ಬಂಗಾಳ	6,00,000	1,000
	1,486,275	2,481
ಕೇಂದ್ರ ಪದಾಧಿಕಾರಿಗಳು		17
ಒಟ್ಟು ಪ್ರತಿನಿಧಿಗಳು		2,498

ಸಿ ಐ ಟಿ ಯು.ನಿಂದ ಸಾಂಕೇತಿಕ ಮುಷ್ಕರ

ಮಾರ್ಚ್ 30ರಂದು ಬೆಂಗಳೂರು ಜಿಲ್ಲಾ ಸಿ.ಐ.ಟಿ.ಯು.ಗೆ ಸೇರಿದ ಕಾರ್ಮಿಕ ಸಂಘಗಳಿಂದ ವಿಧಾನಸೌಧದ ಮುಂದೆ ಕಾರ್ಮಿಕರ ಬೇಡಿಕೆಗಳನ್ನು ಒತ್ತಾಯಿಸಿ ಒಂದು ದಿನದ ಸಾಂಕೇತಿಕ ಮುಷ್ಕರವನ್ನು ನಡೆಸಲಾಯಿತು.

ಟೆಕ್ಸ್‌ಟೈಲ್ ಕಾರ್ಮಿಕರ ಸರ್ವೀಸ್ ಗ್ರಾಚ್ಯುಟಿ ಕುರಿತು, ಕಾರ್ಮಿಕ ಸಂಘಗಳ ಅಂಗೀಕಾರ ಕುರಿತು, ಐ.ಟಿ.ಸಿ., ರಾಮ್‌ಕುಮಾರ್ ಮಿಲ್ಸ್, ಆಂಧ್ರ ಮತ್ತು ಸದರನ್ ಸ್ಟೀಲ್ಸ್. ಎಲೆಕ್ಟ್ರೋಮ್ಸ್, ಮುಂತಾದ ಕಡೆಗಳಲ್ಲಿನ ಕಾರ್ಮಿಕ ಸಂಘಗಳನ್ನು ಮಾನ್ಯತೆ ಮಾಡಿ ಆವುಗಳ ಆಡಳಿತ ವರ್ಗಗಳನ್ನು ಮಾತುಕತೆಗೆ ಬರುವಂತೆ ಒತ್ತಾಯಿಸಲು ಬೆಂಗಳೂರು ಜಿಲ್ಲಾ ಸಿ.ಐ.ಟಿ.ಯು. ಈ ಸಾಂಕೇತಿಕ ಮುಷ್ಕರವನ್ನು ವ್ಯವಸ್ಥೆಗೊಳಿಸಿತ್ತು.

ಸಂಜೆ ಕಬ್ಬನ್‌ಪಾರ್ಕ್‌ನಲ್ಲಿ ನಡೆದ ಭಾರೀ ಬಹಿರಂಗ ಸಭೆಯಲ್ಲಿ ಕಾರ್ಮಿಕ ನಾಯಕರಾದ ಹಾಗೂ ಶಾಸಕರಾದ ಕಾ. ಸೂರ್ಯನಾರಾಯಣರಾವ್ ಅವರು ಮಾತನಾಡಿ ಮಾಲೀಕ ವರ್ಗಗಳ ಕುತಂತ್ರಗಳನ್ನು ಖಂಡಿಸಿದರು.

ಕರ್ನಾಟಕದ ಮುಖ್ಯಮಂತ್ರಿಗಳಾದ ಶ್ರೀ ರಾಮಕೃಷ್ಣ ಹೆಗಡೆ ಅವರು ಸಭೆಗೆ ಆಗಮಿಸಿದ್ದರು. ಅವರಿಗೆ ಮನವಿ ಪತ್ರವನ್ನು ಅರ್ಪಿಸಲಾಯಿತು. ಮನವಿ ಪತ್ರದಲ್ಲಿ ಒಳಗೊಂಡಿರುವ ಬೇಡಿಕೆಗಳ ಬಗ್ಗೆ ಕೂಡಲೇ ಕ್ರಮ ಕೈಗೊಳ್ಳುವುದಾಗಿ ಮುಖ್ಯಮಂತ್ರಿಗಳು ಭರವಸೆ ನೀಡಿದರು.

ಸಂತಾಪ

ಮಾರ್ಕ್ಸವಾದಿ ಕಮ್ಯೂನಿಸ್ಟ ಪಾರ್ಟಿಯ ಹಿತೈಷಿ ಹಾಗೂ ಐಕ್ಯರಂಗ ಪತ್ರಿಕೆ ಓದಗರು ಆದ ಬಿಕರ್ಣಕಟ್ಟೆ ಕೆ. ರಾಘವಪಂಡಿತ್‌ರವರ ಧರ್ಮಪತ್ನಿ ಶ್ರೀಮತಿ ಪ್ರಭಾವತಿ ಆರ್. ಪಂಡಿತ್‌ರವರು ತಾ॥ 24–1–83ರಂದು ನಿಧನರಾದರು. ಮಾರ್ಕ್ಸವಾದೀ ಕಮ್ಯೂನಿಸ್ಟ ಪಾರ್ಟಿಯ ಕುಲಶೇಖರ ಶಾಖೆಯ ಹಾಗೂ ಪದವು ಪ್ರದೇಶ ಬೀಡಿ ಕೆಲಸಗಾರರ ಸಂಘವು ಶ್ರೀಮತಿ ಪ್ರಭಾವತಿ ಆರ್. ಪಂಡಿತ್‌ರವರ ನಿಧನಕ್ಕೆ ಸಂತಾಪ ಸೂಚಿಸಿದೆ.

Printed & Published by P. Ramachandra Rao by him on behalf of the Communist Party of India (Marxist) Karnataka State Committee L-56 K. V. Temple Street Sultanpet, Bangalore 560053. Editorial and managerial office : L-56, K. V. Temple Street, Sultanpet, B-53. Phone : 24154
Printed at Karnataka Pressmen Associates (P) Limited, 54/1, K. R. Road, Bangalore-4 Editor : P. RAMACHANDRA RAO